## 2015 ಕ.ತೀ.ವ 26

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಅಬ್ದುಲ್ ನಜ್ಜೀರ್
### ಮತ್ತು
### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಎಸ್.ಕೆಂಪಣ್ಣ

### ಕರ್ನಾಟಕ ರಾಜ್ಯ ಸರ್ಕಾರದ ಕಾರ್ಯದರ್ಶಿ, ಗೃಹ ಇಲಾಖೆ ಮತ್ತು ಮತ್ತೊಬ್ಬರು –ವಿರುದ್ಧ– ಶ್ರೀ ಎಸ್.ಡಿ. ಶಶಿಧರ ಮತ್ತು ಇತರರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಖಾಲಿಯಿದ್ದ 147 ಆರಕ್ಷಕ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) ಭರ್ತಿ ಮಾಡಲು ಅಧಿಸೂಚನೆಯನ್ನು ನೀಡಿರುತ್ತಾರೆ. ನ್ಯಾಯಾಧಿಕರಣದ ಮುಂದಿದ್ದ ಅರ್ಜಿದಾರರು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ 3–ಬಿ ರನ್ವಯ ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ಸದರಿ ಹುದ್ದೆಗೆ ಆಯ್ಕೆಯಾಗುತ್ತಾರೆ. ಓರ್ವ ಅಭ್ಯರ್ಥಿಯು ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ನಡೆದ ಆಯ್ಕೆಯು ಭಾರತ ಸಂವಿಧಾನ ಪರಿಚ್ಛೇದ 13 ಖಂಡಿಕೆ (2)ರನ್ವಯ ಅನೂರ್ಜಿತವೆಂದು ವಾದಿಸಿ ಸಲ್ಲಿಸಿದ ಅರ್ಜಿಯನ್ನು ಏಕಸದಸ್ಯ ಪೀಠವು ಪುರಸ್ಕರಿಸಿರುತ್ತದೆ. ತದನಂತರ ರಿಟ್ ಅರ್ಜಿದಾರರು ಹೊಸದಾಗಿ ತಯಾರಿಸಿದ ಪಟ್ಟಿಯಲ್ಲಿ ಗ್ರಾಮೀಣ ಕೃಪಾಂಕದಿಂದ ಆಯ್ಕೆಗೊಂಡಿದ್ದ ಅಭ್ಯರ್ಥಿಗಳ ಹೆಸರನ್ನು ಕೈಬಿಟ್ಟ ಸಂದರ್ಭದಲ್ಲಿ ಅವರುಗಳು ನ್ಯಾಯಾಧಿಕರಣದಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಹೊರಡಿಸಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ 3–ಬಿ ಅಸಂವಿಧಾನಾತ್ಮಕವೆಂದು ಘೋಷಿಸಿದ ಮೇಲೆ ಆ ನಿಯಮಾವಳಿಯ ಆಧಾರದ ಮೇಲೆ ನಡೆದ ಆಯ್ಕೆಯು ಊರ್ಜಿತವಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ಪುರಸ್ಕರಿಸಿದೆ.

*ರಿಟ್ ಅರ್ಜಿ ಸಂ. 1901/2010 ಇದರೊಂದಿಗೆ ಇತರೆ, ದಿನಾಂಕ: 20ನೇ ಫೆಬ್ರವರಿ, 2014.

**ಉಲ್ಲೇಖಿಸಲಾದ ಮೊಕದ್ದಮೆಗಳು** **ಪ್ಯಾರಾಗಳಲ್ಲಿ**

1. ಐಎಲ್‌ಆರ್ 1999 ಕೆಎಆರ್ 1814
ಬಸವರಾಜ್ ನಾಗೂರ್ –ವಿರುದ್ಧ–
ಕರ್ನಾಟಕ ಮತ್ತು ಮತ್ತೊಬ್ಬರು (ಉಲ್ಲೇ) 3
2. ಐಎಲ್‌ಆರ್ 2000 ಕೆಎಆರ್ 870
ಕರ್ನಾಟಕ ರಾಜ್ಯ –ವಿರುದ್ಧ–
ಬಸವರಾಜ್ ನಾಗೂರು ಹಾಗೂ ಇತರರು (ಉಲ್ಲೇ) 9
3. (2002) 9 ಎಸ್‌ಸಿಸಿ 441
ಶ್ರೀಧರ ಎಸ್. –ವಿರುದ್ಧ–
ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು (ಉಲ್ಲೇ) 11
4. (1996) 11 ಎಸ್‌ಸಿಸಿ 462
ಮೀರತ್ ಅಭಿವೃದ್ಧಿ ಪ್ರಾಧಿಕಾರ –ವಿರುದ್ಧ–
ಸತ್ಬೀರ್ ಸಿಂಗ್ (ಉಲ್ಲೇ) 37
5. (1997) 1 ಎಸ್‌ಸಿಸಿ 326
ತಮಿಳುನಾಡು ರಾಜ್ಯ –ವಿರುದ್ಧ–
ಅರೂರನ್ ಶುಗರ್ಸ್ ಲಿಮಿಟೆಡ್ (ಉಲ್ಲೇ) 38
6. (2006) 5 ಎಸ್‌ಸಿಸಿ 65
ಬಿಹಾರ ರಾಜ್ಯ –ವಿರುದ್ಧ–
ಬಿಹಾರ ನಿವೃತ್ತಿವೇತನದಾರರ ಸಮಾಜ (ಉಲ್ಲೇ) 40
7. (1993) 1 ಎಸ್‌ಸಿಸಿ 345
ವಿಜಯ್ ಮಿಲ್ಸ್ ಕಂಪನಿ ಲಿಮಿಟೆಡ್ ಮತ್ತು ಇತರರು
–ವಿರುದ್ಧ– ಗುಜರಾತ್ ರಾಜ್ಯ ಮತ್ತು ಇತರರು (ಉಲ್ಲೇ) 41
8. ಎಐಆರ್ 1975 ಎಸ್‌ಸಿ 563
ಉತ್ತರ ಪ್ರದೇಶ ರಾಜ್ಯ –ವಿರುದ್ಧ–
ಪ್ರದೀಪ್ ಟಂಡನ್ (ಉಲ್ಲೇ) 43
9. (1984) 4 ಎಸ್‌ಸಿಸಿ 296
ಸುನೀಲ್ ಜೇಟ್ಲಿ –ವಿರುದ್ಧ– ಹರಿಯಾಣ ರಾಜ್ಯ (ಉಲ್ಲೇ) 43
10. ಎಐಆರ್ 1982 ಎಸ್‌ಸಿ 1301
ಮಹಾರಾಷ್ಟ್ರ ರಾಜ್ಯ– ವಿರುದ್ಧ– ರಾಜ್‌ಕುಮಾರ್ (ಉಲ್ಲೇ) 43

*11. 2012(5) ಕೆಸಿಸಿಆರ್ 3657*
*ಆರ್.ಮಂಜುನಾಥ್ -ವಿರುದ್ಧ- ಕರ್ನಾಟಕ ರಾಜ್ಯ (ಉಲ್ಲೇ) 49*

ರಿ.ಅ. ಸಂಖ್ಯೆ: 1901/2010 ಮತ್ತು ಕ್ರಿ.ಅ.ಸಂಖ್ಯೆ 6815-6831/2010
ಅರ್ಜಿದಾರರ ಪರ : ಶ್ರೀಮತಿ ಎಸ್.ಸುಶೀಲ -ಎ.ಜಿ.ಎ
1 ರಿಂದ 3, 8 ರಿಂದ 10ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಬಿ.ಎಸ್.ವಿಜಯಲಕ್ಷ್ಮಿ- ವಕೀಲರು,
6, 11 ಮತ್ತು 12ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿ.ಲಕ್ಷ್ಮೀನಾರಾಯಣ - ವಕೀಲರು,
1 ರಿಂದ 3, 3ರಿಂದ 10ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಬಿ.ಎಸ್.ವಿಜಯಲಕ್ಷ್ಮಿ
7ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ.ಎನ್. ನಂಜುಂಡ ರೆಡ್ಡಿ, ಹಿರಿಯ ವಕೀಲರು - ಶ್ರೀ ದೇಶ್‌ರಾಜ್, ಶ್ರೀ ಪಿ.ಚಂಗಲಯ ರೆಡ್ಡಿ - ವಕೀಲರು,
4 ಮತ್ತು 5ನೇ ಪ್ರತ್ಯರ್ಜಿದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿಲ್ಲ.

ರಿಟ್ ಅರ್ಜಿ ಸಂಖ್ಯೆ: 35770-35775/2009 ಮತ್ತು 35943-35954/2009
ಅರ್ಜಿದಾರರ ಪರ : ಮೆ: ಪಿ.ಎಸ್.ರಾಜಗೋಪಾಲ್ ಎ.ಎಸ್. ವಕೀಲರು
ಶ್ರೀ ಎಂ.ಎನ್. ಪ್ರಸನ್ನ-ವಕೀಲರು,
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಎಸ್. ಸುಶೀಲ-ಎ.ಜಿ.ಎ,
3 ರಿಂದ 6, 11 ಮತ್ತು 12ನೇ ಪ್ರತ್ಯರ್ಜಿದಾರರ ಪರ : ಶ್ರೀ ರವಿವರ್ಮ ಕುಮಾರ್ ಎ/ಎಸ್ ಪರ ಶ್ರೀ ಪ್ರಶಾಂತ್, ವಕೀಲರು,
3 ಮತ್ತು 12ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಬಿ.ಎಸ್.ವಿಜಯಲಕ್ಷ್ಮಿ ಮತ್ತು ಕೆ.ಸಿ.ಶಾಂತಕುಮಾರ್ - ವಕೀಲರು
7, 9 ರಿಂದ 15ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ.ಎನ್. ನಂಜುಂಡ ರೆಡ್ಡಿ, ಹಿರಿಯ ವಕೀಲರ ಪರ ಶ್ರೀ ದೇಶ್‌ರಾಜ್, ಶ್ರೀ ಪಿ.ಚಂಗಲರಾಯ ರೆಡ್ಡಿ - ವಕೀಲರು,
8,10,13 ಮತ್ತು 14ನೇ ಪ್ರತ್ಯರ್ಜಿದಾರ ಪರ: ಶ್ರೀ ವಿ.ಲಕ್ಷ್ಮೀನಾರಾಯಣ - ವಕೀಲರು.

ರಿಟ್ ಅರ್ಜಿ ಸಂಖ್ಯೆ 26-28/2010 ಮತ್ತು 234-248/2010
ಅರ್ಜಿದಾರರ ಪರ : ಶ್ರೀ ಹೆಗ್ಡೆ ಎ/ಎಸ್ - ವಕೀಲರು,
1ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಎಸ್.ಸುಶೀಲ -ಎ.ಜಿ.ಎ,
7, 9 ಮತ್ತು 15ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ.ಎನ್. ನಂಜುಂಡ ರೆಡ್ಡಿ, ಹಿರಿಯ ವಕೀಲರ ಪರ - ಶ್ರೀ ದೇಶ್‌ರಾಜ್, ಶ್ರೀ ಪಿ.ಚಂಗಲರಾಯ ರೆಡ್ಡಿ - ವಕೀಲರು,

8, 10, 12, 13 ಮತ್ತು 14ನೇ ಪ್ರತ್ಯರ್ಜಿದಾರ ಪರ: ಶ್ರೀ ವಿ.ಲಕ್ಷ್ಮೀನಾರಾಯಣ– ವಕೀಲರು,
3 ರಿಂದ 5ನೇ ಪ್ರತ್ಯರ್ಜಿದಾರ ಪರ: ಮೆ: ರವಿವರ್ಮ ಕುಮಾರ್ ಎ/ಎಸ್. – ವಕೀಲರು,
6 ಮತ್ತು 11ನೇ ಪ್ರತ್ಯರ್ಜಿದಾರರಿಗೆ ಜಾರಿಮಾಡಲಾಗಿದೆ ಮತ್ತು ಪ್ರತಿನಿಧಿಸಿಲ್ಲ.

ರಿಟ್ ಅರ್ಜಿ ಸಂಖ್ಯೆ 21643–21645/2010 ಮತ್ತು 35293–35307/2010
ಅರ್ಜಿದಾರರ ಪರ : ಎಂ.ಹೆಚ್.ಪ್ರಕಾಶ್ – ವಕೀಲರು,
1ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಎಸ್. ಸುಶೀಲ –ಎ.ಜಿ.ಎ,
7, 9, 12 & 14ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ.ಎನ್. ನಂಜುಂಡ ರೆಡ್ಡಿ, ಹಿರಿಯ ವಕೀಲರ ಪರ – ಶ್ರೀ ದೇಶ್‌ರಾಜ್, ಶ್ರೀ ಪಿ. ಚಂಗಲರಾಯ ರೆಡ್ಡಿ – ವಕೀಲರು
3 ರಿಂದ 5, 8, 10, 11, 13 ಮತ್ತು 15 ನೋಟೀಸ್ ಜಾರಿ ಮಾಡಿರುವುದು ಸಾಕಷ್ಟಾಗಿದೆ. 6ನೇ ಪ್ರತ್ಯರ್ಜಿದಾರರಿಗೆ ಜಾರಿಮಾಡಲಾಗಿದೆ ಮತ್ತು ಪ್ರತಿನಿಧಿಸಿಲ್ಲ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಅಬ್ದುಲ್ ನಜೀರ್**:

ಕರ್ನಾಟಕ ರಾಜ್ಯ ಹಾಗೂ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರ, ಅರ್ಜಿ ಸಂಖ್ಯೆ 5148/2008ಕ್ಕೆ ಸಂಬಂಧಪಟ್ಟ 5995, 5996, 5997, 5998 ಹಾಗೂ 5999/2008 ರ ದಿನಾಂಕ 23.11.2009 ರಲ್ಲಿ ಹೊರಡಿಸಿದ ಆದೇಶದ ಕಾನೂನು ಸಮ್ಮತತೆಯನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂ:1901/2010 ಹಾಗೂ 6815–6831/2010ನ್ನು ದಾಖಲ್ಮಾಡಿದೆ.

2. ಹಿಂದೆ ಹೇಳಲಾದ ನ್ಯಾಯಾಧಿಕರಣದ ಆದೇಶವನ್ನು ಟೀಕಿಸಿ ಇತರ ಎಲ್ಲಾ ರಿಟ್ ಅರ್ಜಿಗಳನ್ನು ದಾಖಲ್ಮಾಡಲಾಗಿದೆ. ಈ ಎಲ್ಲಾ ಮೊಕದ್ದಮೆಗಳಲ್ಲಿನ ಅರ್ಜಿದಾರರನ್ನು, 'ಅರ್ಜಿದಾರರು' ಎಂದು ಉಲ್ಲೇಖಿಸಲಾಗಿದೆ ಹಾಗೂ ಖಾಸಗಿ ಪ್ರತಿವಾದಿಗಳನ್ನು ಅನುಕೂಲದ ಕಾರಣಕ್ಕೆ 'ಅರ್ಜಿದಾರರೆಂದು' ಉಲ್ಲೇಖಿಸಲಾಗಿದೆ.

3. ಈ ರಿಟ್ ಅರ್ಜಿಗಳನ್ನು ವಿಲೇವಾರಿ ಮಾಡಲು ಅಗತ್ಯವಿರುವ ಸಂಕ್ಷಿಪ್ತ ಅಂಶಗಳು ಈ ಮುಂದಿನಂತಿವೆ:

ಪೊಲೀಸು ಉಪ–ನಿರೀಕ್ಷಕರ ನೇಮಕಾತಿ ಸಮಿತಿಯು, ಪೊಲೀಸು ಉಪ–ನಿರೀಕ್ಷಕರ (ಸಿವಿಲ್) 147 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 7.02.1996ರ ಅಧಿಸೂಚನೆಯನ್ನು ಹೊರಡಿಸಿತ್ತು. ಸದರಿ ಅಧಿಸೂಚನೆಗೆ ಅನುಸಾರವಾಗಿ ಆಯ್ಕೆ ಮಾಡುವ ಸಂಬಂಧವಾಗಿ ಅರ್ಜಿದಾರರು ಅಭ್ಯರ್ಥಿಗಳಾಗಿದ್ದರು. ಅರ್ಜಿದಾರರು, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1976ರ (ಸಂಕ್ಷಿಪ್ತತೆಗಾಗಿ 'ನಿಯಮಗಳು') 3–ಬಿ ನಿಯಮದ ಮೇರೆಗೆ ಗ್ರಾಮೀಣ ಕೃಪಾಂಕವನ್ನು ಕ್ಲೇಮು ಮಾಡಿದ್ದರು. ಬಸವರಾಜ್ ನಾಗೂರ್ ಎಂಬ ಒಬ್ಬರು ರಿಟ್ ಅರ್ಜಿ ಸಂ. 13157/1998 ರಲ್ಲಿ 3–ಬಿ ನಿಯಮದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿದ್ದರು. ಈ ನ್ಯಾಯಾಲಯದ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ದಿನಾಂಕ 11.11.1998 ರ ಆದೇಶದ ಮೂಲಕ, ಗ್ರಾಮೀಣ ಅಭ್ಯರ್ಥಿಗಳಿಗೆ ಕೃಪಾಂಕದ ಅಂಕಗಳನ್ನು ಉಪಬಂಧಿಸುವ 3–ಬಿ ನಿಯಮವು ಭಾರತ ಸಂವಿಧಾನದ 13 ನೇ ಅನುಚ್ಛೇದದ (2)ನೇ ಖಂಡದ ನಿಬಂಧನೆಗಳಲ್ಲಿ ಶೂನ್ಯಗೊಳಿಸಲಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ***(ಬಸವರಾಜ್ ನಾಗೂರ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು***[1], ಪ್ರಕರಣದಲ್ಲಿ ವರದಿಯಾಗಿದೆ). ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "7. 16(4) ನೇ ಅನುಚ್ಛೇದದ ಉದ್ದೇಶಗಳಿಗಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ನಾಗರಿಕ ವರ್ಗವನ್ನು 'ಗ್ರಾಮೀಣ ಅಭ್ಯರ್ಥಿ' ಎಂಬ ಪರಿಭಾಷೆಯನ್ನು ಒಳಗೊಂಡ ಸಂಪೂರ್ಣ ಜನರನ್ನು ಅಥವಾ ರಾಜ್ಯದ ಅಭಿಪ್ರಾಯದಲ್ಲಿ, ರಾಜ್ಯದ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದಿರುವ ಹಿಂದುಳಿದ ನಾಗರಿಕ ವರ್ಗವನ್ನು ಒಟ್ಟಾಗಿ ಸೃಜಿಸಿ ಸಾಮಾನ್ಯ ನೇಮಕಾತಿಗಳಲ್ಲಿ ಯಾವುದೇ ಕೃಪಾಂಕ,

1. ಐಎಲ್ಆರ್ 1999 ಕೆಎಆರ್ 1814

ವಿನಾಯಿತಿಗಳು, ರಿಯಾಯಿತಿಗಳು ಅಥವಾ ವಿಶೇಷ ಹಕ್ಕುಗಳಿಗೆ ಅವರು ಹಕ್ಕುಳ್ಳವರೆಂದು ತೋರಿಸಲು ಯಾವುದೇ ವಿಷಯವನ್ನು **ಪ್ರತಿಶಪಥ** ಪತ್ರ ಮೂಲಕವಾಗಲಿ ಇಲ್ಲವೇ ಸ್ವತಂತ್ರವಾಗಿಯಾಗಲೀ ಈ ನ್ಯಾಯಾಲಯದ ಮುಂದೆ ಮಂಡಿಸಲಾಗಿಲ್ಲ. ವಾಸ್ತವವಾಗಿ, ಸರ್ಕಾರಿ ಟಿಪ್ಪಣಿಯಲ್ಲಿ ಉದ್ಧೃತಗೊಳಿಸಲಾದಂತೆ, 1994ನೇ ವರ್ಷದಲ್ಲಿ ಪ್ರಾರಂಭಿಕ ನಿರ್ಣಯವನ್ನು ತೆಗೆದುಕೊಳ್ಳುವ ಸಮಯದಲ್ಲಿ ಮೂಲ ಪ್ರಶ್ನಿತ ನಿಯಮಗಳನ್ನು ಸೇರಿಸುವಾಗ, ಏನನ್ನು ಹೇಳಿತ್ತು ಈ ದಿನದವರೆಗೂ ಸಹ ಗ್ರಾಮೀಣ ಅಭ್ಯರ್ಥಿಗಳು ಅಥವಾ ರಾಜ್ಯದಲ್ಲಿನ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಹೊಂದಿರದ ಗ್ರಾಮೀಣ ಪ್ರದೇಶಗಳಿಂದ ಬಂದಿರುವ ವ್ಯಕ್ತಿಗಳ ಹಿಂದುಳಿದಿರುವಿಕೆಯನ್ನು ಸಮರ್ಥಿಸಿಕೊಳ್ಳುವುದಾಗಲಿ ಯಾವುದೊಂದೂ ಗೊತ್ತುಪಾಡುಗಳೂ ಲಭ್ಯವಿಲ್ಲ.

8. ನನ್ನ ಅಭಿಪ್ರಾಯದಲ್ಲಿ ತುಂಬಾ ಹಿಂದೆ ಸರ್ವೋಚ್ಚ ನ್ಯಾಯಾಲಯವು ಈ ಪ್ರಶ್ನೆಗಳಿಗೆ ಸಂಬಂಧಿಸಿದ ಕಾನೂನನ್ನು ನಿರ್ಧರಿಸಿರುವುದರಿಂದ ನ್ಯಾಯಸ್ಥಾನದಲ್ಲಿ ಉದ್ಭವಿಸಿರುವ ಪ್ರಶ್ನೆಗಳು ನ್ಯಾಯನಿರ್ಣೀತ ವಿಷಯಗಳಾಗಿರುವುದಿಲ್ಲ. ಆದರೆ, ಸರ್ವೋಚ್ಚ ನ್ಯಾಯಾಲಯವು ಮಾಡಿದ ಕಾನೂನಿನ ಘೋಷಣೆ ಕುರಿತಂತೆ ಸಂಪೂರ್ಣ ತಿಳಿವಳಿಕೆ ಇದ್ದರೂ ಕೂಡ ದುರಾದೃಷ್ಟವಶಾತ್, ಇನ್ನೂ ರಾಜಕೀಯ ಶಕ್ತಿಗಳು ಮತದಾರರನ್ನು ಒಲಿಸಿಕೊಳ್ಳುವ / ಸೆಳೆಯುವ ಸಲುವಾಗಿ ಹಾಗೂ ತಮ್ಮ ತಮ್ಮ ಮತ ಬ್ಯಾಂಕುಗಳನ್ನು ಹೆಚ್ಚಿಸಿಕೊಳ್ಳಲು ಹಲವಾರು ಅರ್ಹ ಅಭ್ಯರ್ಥಿಗಳ, ಅವರ ಉದ್ಯೋಗದ ಮೂಲಭೂತ ಹಕ್ಕುಗಳು ಹಾಗೂ ಜೀವನೋಪಾಯವನ್ನು ಕಸಿದುಕೊಳ್ಳುವ ಈ ಪ್ರಶ್ನಿತ ಇಂಥ ಸಾಂವಿಧಾನಿಕವಾಗಿ ಅಸಿಂಧುವಾದ ನಿಯಮವನ್ನು ರೂಪಿಸುವ ಸಾಹಸಕ್ಕೆ ಕೈ ಹಾಕಿವೆ. ಭಾರತದ ಸಂವಿಧಾನದ ಸಾರ್ವಭೌಮತ್ವವನ್ನು ಹಾಗೂ ಕಾನೂನಿನ ನಿಯಮವನ್ನು

ಕಾಪಾಡುವ ಆತ್ಮಸಾಕ್ಷಿಗನುಗುಣವಾಗಿ ಮಾಡುವ ಪ್ರಮಾಣ ವಚನದ ಮೇರೆಗೆ ಕಾರ್ಯನಿರ್ವಹಿಸುವ ಸರ್ಕಾರವು ಸ್ವಲ್ಪ ಹೆಚ್ಚಿನ ಜಾಗರೂಕತೆಯಿಂದ ವರ್ತಿಸಬೇಕು ಹಾಗೂ ಅಸಾಂವಿಧಾನಿಕ ಜನಪ್ರಿಯ ಕ್ರಮಗಳಿಗೆ ಜೋತು ಬೀಳುವುದನ್ನು ನಿಲ್ಲಿಸಬೇಕು.

14. ಹಿಂದೆ ಹೇಳಲಾದ ಕಾರಣಗಳಿಗಾಗಿ ಹಾಗೂ ಸುನೀಲ್ ಜೋಶಿ ಪ್ರಕರಣದಲ್ಲಿ ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ಗ್ರಾಮೀಣ ಶಾಲೆಗಳಲ್ಲಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳು, ಶಾಲಾ ಮಟ್ಟದ ಶಿಕ್ಷಣ ಪಡೆದುಕೊಳ್ಳುವ ವಿಷಯದಲ್ಲಿ ಯಾವುದೇ ರೀತಿಯಲ್ಲಿ ಯಾವುದೇ ಅನಾನುಕೂಲ ಹೊಂದಿದ್ದರೆಂಬುದನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಆದರೆ, ಅದೂ ಅಲ್ಲದೆ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುವಂತೆ, ಅದರಿಂದಲೇ ಅಂಥ ಸ್ಪಷ್ಟೀಕರಣವನ್ನು ಸಾಂವಿಧಾನಿಕವಾಗಿ ನಿಷಿದ್ಧಗೊಳಿಸಲಾಗಿದೆ".

4. 18ನೇ ಕಂಡಿಕೆಯಲ್ಲಿ, ಏಕಸದಸ್ಯ ಪೀಠದ ಮಾನ್ಯ ನ್ಯಾಯಾಧೀಶರು, ಮೇಲಿನ ಘೋಷಣೆಯಲ್ಲಿ ಏನೇ ಇದ್ದರೂ, ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ಈಗಾಗಲೇ ನೇಮಕ ಮಾಡಿದ ವ್ಯಕ್ತಿಗಳ ನೇಮಕಾತಿಗೆ ಸದ್ಯದ ತೀರ್ಪಿನ ಕಾರಣದಿಂದ ತಮ್ಮ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ತೊಂದರೆಯಾಗಬಾರದೆಂದೂ ಹಾಗೂ ಅವರ ನೇಮಕಾತಿಗೆ ವ್ಯತಿರಿಕ್ತ ಪರಿಣಾಮ ಉಂಟಾಗಬಾರದೆಂದೂ ಸ್ಪಷ್ಟಪಡಿಸಿದ್ದಾರೆ.

5. ಕರ್ನಾಟಕ ರಾಜ್ಯವು, ರಿ.ಅ.ಸಂ.5807/1998ನ್ನು ದಾಖಲು ಮಾಡುವ ಮೂಲಕ ಸದರಿ ಆದೇಶವನ್ನು ಪ್ರಶ್ನಿಸಿತು. ಅಪೀಲನ್ನು ಅಂಗೀಕರಿಸುವಾಗ ವಿಭಾಗೀಯ ಪೀಠವು, ಈ ಕೆಳಗಿನಂತೆ ಮಧ್ಯಂತರ ಆದೇಶವನ್ನು ಹೊರಡಿಸಿತು:

> "ಇಲ್ಲಿ ಇನ್ನು ಮುಂದೆ ಮಾಡಲಾಗುವ ಆಯ್ಕೆಗಳು / ನೇಮಕಾತಿಗಳನ್ನು, ಅಪೀಲಿನ ನಿರ್ಣಯಕ್ಕೊಳಪಟ್ಟು ಮಾಡತಕ್ಕದ್ದೆಂದು ಪ್ರಶ್ನಿತ ಕಾರ್ಯಾಚರಣೆಯನ್ನು ಷರತ್ತಿಗೊಳಪಟ್ಟು ತಡೆಹಿಡಿಯಲಾಗಿದೆ. ನೇಮಕಾತಿ ಪ್ರಾಧಿಕಾರವು, ಗ್ರಾಮೀಣ ಕೃಪಾಂಕವಿರುವ ಅಭ್ಯರ್ಥಿಗೆ 'ನೇಮಕಾತಿ ಆದೇಶವನ್ನು' ನೀಡುವ ಮೊದಲು, ನೀಡಲಾದ ನೇಮಕಾತಿ ಆದೇಶವು ಈ ವ್ಯವಹರಣೆಗಳ ನಿರ್ಣಯಕ್ಕೆ ಒಳಪಟ್ಟಿರತಕ್ಕದ್ದೆಂದು ಹಾಗೂ ಏಕಸದಸ್ಯ ಪೀಠವು ಅಭಿಪ್ರಾಯಪಟ್ಟಿರುವ ರೀತಿಯಲ್ಲಿ ಅಭ್ಯರ್ಥಿಯು ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿಲ್ಲವೆಂಬ ಮುಚ್ಚಳಿಕೆ ಪತ್ರವನ್ನು ಅಭ್ಯರ್ಥಿಯಿಂದ ಪಡೆದುಕೊಳ್ಳತಕ್ಕದ್ದು".

6. ಈ ನಡುವೆ, ಶ್ರೀಮತಿ ಸಿ.ಕೆ.ಹೇಮಲತಾ ಹಾಗೂ ಇತರರು ಅರ್ಜಿ ಸಂ.3167/1998 ರಲ್ಲಿ ಹಾಗೂ ದಿನಾಂಕ:7.2.1996ರ ಅಧಿಸೂಚನೆ ಮೂಲಕ ಪ್ರಾರಂಭಿಸಲಾದ ಪೊಲೀಸು ಸಬ್ಇನ್ಸ್‌ಪೆಕ್ಟರ್ ನೇಮಕಾತಿ ಸಂಬಂಧದಲ್ಲಿ ಇತರ ಸಂಬಂಧಪಟ್ಟ ವಿಷಯಗಳಿಗಾಗಿ ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣದ ಮೊರೆ ಹೋದರು. ನ್ಯಾಯಾಧೀಕರಣವು, ದಿನಾಂಕ 27.11.1998ರ ಆದೇಶದ ಮೂಲಕ ಈ ಮುಂದಿನ ನಿರ್ದೇಶನಗಳ ಅನುಸಾರ ಅರ್ಜಿಗಳನ್ನು ವಿಲೇವಾರಿ ಮಾಡಿತು.

"21. ಆದ್ದರಿಂದ ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ:

> (ಎ) ಎದುರುದಾರರು, ಅಭ್ಯರ್ಥಿಗಳು ಗಳಿಸಿದ ಅಂಕಗಳ ಜೊತೆಗೆ ಅರ್ಹತೆಯನ್ನು ಆಧರಿಸಿದ ಲಿಖಿತ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸತಕ್ಕದ್ದು. ಒಟ್ಟಾರೆ ಫಲಿತಾಂಶವನ್ನು, ನೇಮಕಾತಿ ಸಮಿತಿಯ ಕಚೇರಿಯಲ್ಲಿ ಪ್ರಕಟಿಸತಕ್ಕದ್ದು. ಪ್ರತಿಯೊಂದು ಪ್ರದೇಶಕ್ಕೆ ಸಂಬಂಧಿಸಿದ ಆಯ್ಕೆ ಪಟ್ಟಿಯನ್ನು ಆಯಾಯ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸತಕ್ಕದ್ದು.

(ಬಿ) ಏಕಕಾಲಿಕವಾಗಿ, ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳನ್ನು ಸೂಚಿಸುವ ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಗಳು ಪಡೆದುಕೊಂಡ ಅಂಕಗಳನ್ನು, ಹಾಗೂ ಸಂದರ್ಶನದಲ್ಲಿ ಪಡೆದುಕೊಂಡ ಅಂಕಗಳನ್ನೂ ಸಹ ಪ್ರಕಟಿಸತಕ್ಕದ್ದು. ಆಕ್ಷೇಪಣೆಗಳನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ 15 ದಿನಗಳನ್ನು ನೀಡಿದ ನಂತರ, ಪ್ರಾಧಿಕಾರಗಳು, ಸಿಂಧುವಾದ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಪರಿಗಣಿಸತಕ್ಕದ್ದು ಹಾಗೂ ಅದಾದ ನಂತರ ಆಯ್ಕೆ ಪಟ್ಟಿಯನ್ನು ಅಂತಿಮ ಗೊಳಿಸತಕ್ಕದ್ದು.

(ಸಿ) ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವಾಗ, ಎನ್.ಸಿ.ಸಿ. ಅಭ್ಯರ್ಥಿಗಳು, ಮಾಜಿ–ಸೈನಿಕ ಸಿಬ್ಬಂದಿ ಹಾಗೂ ಕ್ರೀಡಾ ಸಿಬ್ಬಂದಿಗೆ ಸಂಬಂಧಿಸಿದ ಮೀಸಲಾತಿಯನ್ನು ಪ್ರಕಟಿಸಲಾದ ಅಧಿಸೂಚನೆಗನುಸಾರವಾಗಿ ಕಟ್ಟುನಿಟ್ಟಾಗಿ ಪರಿಗಣಿಸತಕ್ಕದ್ದು.

(ಡಿ) ಗ್ರಾಮೀಣ ಕೃಪಾಂಕವನ್ನು ನೀಡುವ ಸಂಬಂಧದಲ್ಲಿ, ಪ್ರಾಧಿಕಾರಿಗಳು 1998ರ ರಿ.ಅ.ಸಂ.13157 ರಲ್ಲಿ ನೀಡಲಾದ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಅಥವಾ ಆ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ಇತರ ನಂತರದ ನ್ಯಾಯಿಕ ತೀರ್ಮಾನವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಇ) ಲಿಖಿತ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಸಂಬಂಧಪಟ್ಟ ಅರ್ಹತಾ ಪಟ್ಟಿಯನ್ನು ಈ ಆದೇಶ ಸ್ವೀಕರಿಸಿದ 15 ದಿನಗಳೊಳಗಾಗಿ ಪ್ರಕಟಿಸತಕ್ಕದ್ದು. ಅದಾದ ನಂತರ, ಈಗಾಗಲೇ ಆದೇಶ ಮಾಡಲಾದಂತೆ, ಅಭ್ಯರ್ಥಿಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಅವರಿಗೆ 15 ದಿನಗಳ ಕಾಲಾವಕಾಶವನ್ನು ನೀಡತಕ್ಕದ್ದು ಮತ್ತು

> ಆಕ್ಷೇಪಣೆಗಳನ್ನು ಸ್ವೀಕರಿಸಿದ ತರುವಾಯ ಮೇಲೆ ಹೇಳಲಾದ ನಿರ್ದೇಶನಗಳ ಹಿನ್ನೆಲೆಯಲ್ಲಿ ಅಂತಿಮಪಟ್ಟಿಯನ್ನು ಪ್ರಕಟಿಸತಕ್ಕದ್ದು.
>
> (ಎಫ್) ಈ ಅರ್ಜಿಗಳಲ್ಲಿ ಪ್ರಶ್ನಿಸಲಾಗಿರುವ ಆಯ್ಕೆ ಪಟ್ಟಿಗಳನ್ನು, ತಳ್ಳಿಹಾಕಲಾಗಿದೆ''.

7. ರಿಟ್ ಅಪೀಲುಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಹಾಗೂ ಅದರಲ್ಲಿನ ದಿನಾಂಕ:4.12.1998ರ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ, ದಿನಾಂಕ 28.12.1998ರ ಅಧಿಸೂಚನೆ ಮೂಲಕ ಯಾವ ಆಯ್ಕೆ ಪಟ್ಟಿಯಲ್ಲಿ ಅರ್ಜಿದಾರರನ್ನು ಗ್ರಾಮೀಣ ಕೃಪಾಂಕ ಕ್ಲೇಮುಮಾಡಿದ ಕಾರಣದಿಂದ ಸೇರಿಸಲಾಗಿದೆಯೋ ಹಾಗೂ ಅವರಿಗೆ ನೀಡಲಾಗಿದೆಯೋ ಆ ಆಯ್ಕೆಪಟ್ಟಿಯನ್ನು ಆಯ್ಕೆ ಸಮಿತಿಯು ಪ್ರಕಟಿಸಿತು. ಸದರಿ ಆಯ್ಕೆ ಪಟ್ಟಿಗೆ ಅನುಸಾರವಾಗಿ, ಅರ್ಜಿದಾರರಿಗೆ ಹಾಗೂ ಅದೇ ರೀತಿ ಇರಿಸಲಾದ ಅಭ್ಯರ್ಥಿಗಳಿಗೆ ಈ ಮುಂದಿನಂತೆ ಸೂಚಿಸಿ ದಿನಾಂಕ 30.12.1998ರ ನೇಮಕಾತಿಯ ತಾತ್ಕಾಲಿಕ ಆದೇಶಗಳನ್ನು ನೀಡಲಾಯಿತು:

> ''ಈ ತಾತ್ಕಾಲಿಕ ನೇಮಕಾತಿ ಆದೇಶವು ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣ, ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳಿಗೆ ಒಳಪಟ್ಟಿರುವುದು''.

8. ಅರ್ಜಿದಾರರಿಗೆ ಅಗತ್ಯ ಮುಚ್ಚಳಿಕೆ ಪತ್ರಗಳನ್ನು ಸಲ್ಲಿಸಲು ಕರೆ ನೀಡಲಾಯಿತು. ತದನುಸಾರವಾಗಿ, ನೇಮಕಾತಿಯು, ಇತ್ಯರ್ಥದಲ್ಲಿರುವ ರಿಟ್ ಅಪೀಲುಗಳ ತೀರ್ಮಾನಗಳು ಹಾಗೂ ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣ ಹಾಗೂ ಭಾರತದ ಸರ್ವೋಚ್ಚ ನ್ಯಾಯಾಲಯವು ನೀಡಬಹುದಾದ ಇತರ ಆದೇಶಗಳಿಗೆ ಒಳಪಟ್ಟಿರತಕ್ಕದ್ದು ಹಾಗೂ ಅವರು, ಏಕಸದಸ್ಯ ಪೀಠದ ಮಾನ್ಯ ನ್ಯಾಯಾಧೀಶರ ಆದೇಶವನ್ನು ಎತ್ತಿಹಿಡಿದ ಸಂದರ್ಭದಲ್ಲಿ ಹುದ್ದೆಯ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲ.

9. ವಿಭಾಗೀಯ ಪೀಠವು, ರಿಟ್ ಅಪೀಲುಗಳನ್ನು ವಜಾಗೊಳಿಸಿ ಏಕಸದಸ್ಯ ಪೀಠದ ಮಾನ್ಯ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಸ್ಥಿರೀಕರಿಸಿದರು ***ಕರ್ನಾಟಕ ರಾಜ್ಯ –ವಿರುದ್ಧ– ಬಸವರಾಜ್ ನಾಗೂರು ಹಾಗೂ ಇತರರು***[2], ಪ್ರಕರಣದಲ್ಲಿ ವಿಭಾಗೀಯ ಪೀಠವು, ರಿಟ್ ಅಪೀಲುಗಳು ಇತ್ಯರ್ಥದಲ್ಲಿದ್ದ ಅವಧಿಯಲ್ಲಿ ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ಅಭ್ಯರ್ಥಿಗಳ ನೇಮಕಾತಿಯನ್ನು ಉಳಿಸಿ ಸಂರಕ್ಷಿಸುವುದನ್ನು ಈ ಮುಂದಿನಂತೆ ವಿಸ್ತರಿಸಿತು:

> “22. ಹಿಂದೆ ಹೇಳಲಾದ ಕಾರಣಗಳಿಗಾಗಿ, ಈ ಅಪೀಲಿನಲ್ಲಿ ನಮಗೆ ಯಾವುದೇ ಅರ್ಹತೆ ಕಂಡುಬರುವುದಿಲ್ಲ. ಮಾನ್ಯ ಏಕಸದಸ್ಯಪೀಠ ನ್ಯಾಯಾಧೀಶರು ಪ್ರಶ್ನಿತ ನಿಯಮಗಳನ್ನು ಬದಿಗೆ ಸರಿಸಿರುವುದು ಸರಿಯಾಗಿದೆ. ‘ಗ್ರಾಮೀಣ ಕೃಪಾಂಕ’ ವನ್ನು ನೀಡುವ ಮೂಲಕ ಈಗಾಗಲೇ ನೇಮಕಗೊಂಡಿರುವ ಅಭ್ಯರ್ಥಿಗಳಿಗೆ ಹಾಗೂ ಈವರೆಗೆ ಈ ಅಪೀಲುಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಗ್ರಾಮೀಣ ಕೃಪಾಂಕ ಆಧಾರದ ಮೇಲೆ ನೇಮಕಗೊಂಡಿರುವ ವ್ಯಕ್ತಿಗಳಿಗೂ ಸಹ ತೊಂದರೆಯಾಗಬಾರದೆಂದು ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವುದನ್ನು ನಾವು ಎತ್ತಿ ಹಿಡಿಯುತ್ತೇವೆ”.
>
> (ನಮ್ಮಿಂದ ಒತ್ತು ನೀಡಲ್ಪಟ್ಟಿದೆ)

10. ಆದೇಶದ ಸ್ಪಷ್ಟೀಕರಣವನ್ನು ಕೋರಿ ರಿಟ್ ಅಪೀಲುಗಳಲ್ಲಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ರಿಟ್ ಅಪೀಲುಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಆಯ್ಕೆಯನ್ನು ಮಾಡಿದ್ದರೂ, ಅವರನ್ನು ರಕ್ಷಿಸಲು ವಿಭಾಗೀಯ ಪೀಠವು, 16.12.1999 ರಂದು ಈ ಮುಂದಿನಂತೆ ವಿಸ್ತರಿಸಿತು:

> “5 ಸಾಲಿನಲ್ಲಿರುವ 26.11.1999 ರಂದು ಈ ನ್ಯಾಯಾಲಯವು ನೀಡಿದ ತೀರ್ಪಿನ ಕಂಡಿಕೆ 22 ರಲ್ಲಿ, ‘ಈಗಾಗಲೇ

2. ಐಎಲ್ಆರ್ 2000 ಕೆಎಆರ್ 870

> ನೇಮಕಗೊಳಿಸಲಾದ' ಎಂಬ ಸ್ಥಳದಲ್ಲಿ, 'ಈಗಾಗಲೇ ಆಯ್ಕೆಗೊಂಡ ಹಾಗೂ ನೇಮಕಗೊಂಡ' ಎಂಬುದನ್ನು ಪ್ರತಿಯೋಜಿಸಬೇಕಾಗುತ್ತದೆ ಹಾಗೂ 6 ಮತ್ತು 7ನೇ ಸಾಲುಗಳಲ್ಲಿ ಕೂಡ, 'ನೇಮಕಗೊಂಡಿರುವ' ಎಂಬ ಪದಗಳಿರುವ ಸ್ಥಳದಲ್ಲಿ, ಈ ಅಪೀಲುಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ 'ನೇಮಕಗೊಂಡ ಅಥವಾ ಆಯ್ಕೆಗೊಂಡ' ಎಂಬುದನ್ನು ಪ್ರತಿಯೋಜಿಸಬೇಕಾಗುತ್ತದೆ''.

11. ಒಬ್ಬರಾದ ಎಸ್.ಶ್ರೀಧರ ಹಾಗೂ ಇತರ 13 ಜನರು ಇದೇ ಪೊಲೀಸು ಸಬ್‌ಇನ್ಸ್‌ಪೆಕ್ಟರ್ ನೇಮಕಾತಿಗೆ ಅಭ್ಯರ್ಥಿಗಳಾಗಿದ್ದರು. ನೇಮಕಾತಿಯನ್ನು ದಿನಾಂಕ 7.2.1996ರ ಅಧಿಸೂಚನೆ ಮೂಲಕ ಪ್ರಾರಂಭಿಸಲಾಗಿತ್ತು. ಇದರಲ್ಲಿ ಅರ್ಜಿದಾರರನ್ನು ಆಯ್ಕೆ ಮಾಡಲಾಯಿತು. 26.11.1999 ಹಾಗೂ 16.12.1999 ರಲ್ಲಿ ವಿಭಾಗೀಯ ಪೀಠವು ಹೊರಡಿಸಿದ ಆದೇಶದಿಂದ ಬಾಧಿತರಾದ ವ್ಯಕ್ತಿಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದರು. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಿನಾಂಕ 11.10.2001 ರಂದು ತನ್ನ ತೀರ್ಮಾನವನ್ನು ನೀಡಿ ***(ಶ್ರೀಧರ ಎಸ್. –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು*[3]**,** ಪ್ರಕರಣದಲ್ಲಿ ವರದಿಯಾಗಿದೆ) ಅಪೀಲುಗಳನ್ನು ಪುರಸ್ಕರಿಸಿ, ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ವಿಸ್ತೃತ ರಕ್ಷಣೆಯನ್ನು ತಳ್ಳಿಹಾಕಿ ಈ ಮುಂದಿನ ನಿಬಂಧನೆಗಳಲ್ಲಿರುವ ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರ ಆದೇಶವನ್ನು ದೃಢೀಕರಿಸಿತು:

> ''9. ಪ್ರತಿಸ್ಪರ್ಧಿ ನಿವೇದನೆಗಳನ್ನು ಪರಿಗಣಿಸಿ ಹಾಗೂ ಪ್ರಸ್ತುತ ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಹಾಗೂ ಮಾನ್ಯ ಏಕಸದಸ್ಯ ಪೀಠದ ತೀರ್ಪಿನ ವಿರುದ್ಧ ಮಾಡಲಾದ ಅಪೀಲನ್ನು ಪುರಸ್ಕರಿಸುವಾಗ ವಿಭಾಗೀಯ ಪೀಠವು ಹೊರಡಿಸಿದ ಆದೇಶಗಳನ್ನು ಪರಿಶೀಲಿಸಿ, ನಾವು, ಶ್ರೀ ರಾಮಾಜೋಯಿಸ್‌ರವರ ವಾದದಲ್ಲಿ ಸಾಕಷ್ಟು ಸತ್ವವಿರುವುದನ್ನು ಗುರುತಿಸಿದ್ದೇವೆ ಹಾಗೂ ಪ್ರತಿವಾದಿಗಳ ಪರವಾಗಿ

3. (2002) 9 ಎಸ್‌ಸಿಸಿ 441

ಹಾಜರಾಗಿರುವ ಶ್ರೀ ಭಟ್‌ರವರು ಮಾಡಿದ ನಿವೇದನೆಗಳನ್ನು ನಮಗೆ ನಾವೇ ಒಪ್ಪಿಕೊಂಡು ಮನದಟ್ಟು ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಸಾಮಾನ್ಯವಾಗಿ ನಿಯಮವನ್ನು ತೆಗೆದುಹಾಕಿರುವ ಅಂಥ ಅಸಿಂಧುವಾದ ನಿಯಮದ ಆಧಾರದ ಮೇಲೆ ಮಾಡಲಾದ ಎಲ್ಲಾ ಆಯ್ಕೆಗಳನ್ನು ಶೂನ್ಯಗೊಳಿಸಬೇಕಾಗುತ್ತದೆ. ಆದರೆ, ಮಾನ್ಯ ಏಕಸದಸ್ಯ ಪೀಠವು ನಿಯುಮವನ್ನು ರದ್ದುಪಡಿಸುವವರೆಗೆ ಈಗಾಗಲೇ ಮಾಡಲಾದ ನೇಮಕಾತಿಗಳನ್ನು ರಕ್ಷಿಸಿದೆ. ಆದರೆ ತಮ್ಮ ಮುಂದಿರುವ ಪ್ರಸ್ತುತ ಪ್ರಕರಣದಲ್ಲಿ, ಅಂತಿಮ ತೀರ್ಪನ್ನು ನೀಡುವಾಗ, ವಿಭಾಗೀಯ ಪೀಠವು ಮಾಡಲಾದಂತೆ ಆ ನಿರ್ದೇಶನದ ವ್ಯಾಪ್ತಿಯನ್ನು ಹೆಚ್ಚಿಸಲು ಹಾಗೂ ವಿಸ್ತರಿಸಲು ಸಾಧ್ಯವಾಗುವುದಿಲ್ಲ. ವಿಭಾಗೀಯ ಪೀಠವು, ಅಪೀಲುಗಳನ್ನು ಪುರಸ್ಕರಿಸುವಾಗ, ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಪರಿಗಣಿಸದೆ ತಪ್ಪೆಸಗಿದೆ. ಆ ಮಧ್ಯಂತರ ಆದೇಶದಲ್ಲಿ, ತದನಂತರ ಮಾಡಲಾಗುವ ಯಾವುದೇ ನೇಮಕಾತಿಗಳು ಅಪೀಲುಗಳ ಅಂತಿಮ ತೀರ್ಮಾನಕ್ಕೆ ಒಳಪಟ್ಟಿರುತ್ತವೆಂಬುದನ್ನು ಸುಸ್ಪಷ್ಟವಾಗಿ ಸೂಚಿಸಲಾಗಿತ್ತು – ಹಾಗೂ ರಾಜ್ಯ ಸರ್ಕಾರವು, ನೇಮಿಸಲ್ಪಟ್ಟ ವ್ಯಕ್ತಿಗಳಿಂದ, ಅವರು ಅಂಥ ನೇಮಕಾತಿಗಳ ಆಧಾರದ ಮೇಲೆ ಯಾವುದೇ ಸಮನ್ಯಾಯವನ್ನು ಕ್ಲೇಮು ಮಾಡಲು ಸಾಧ್ಯವಾಗುವುದಿಲ್ಲವೆನ್ನುವ ಮುಚ್ಚಳಿಕೆ ಪತ್ರವನ್ನು ಅವರಿಂದ ಪಡೆದುಕೊಂಡಿತ್ತು. ವಾಸ್ತವವಾಗಿ, ಏಕಸದಸ್ಯ ಪೀಠ ನ್ಯಾಯಮೂರ್ತಿಗಳು ಹೊರಡಿಸಿದ ಆದೇಶದ ನಂತರ ನೇಮಕಗೊಂಡ ಎಲ್ಲರಿಂದ ಅಂಥ ಮುಚ್ಚಳಿಕೆ ಪತ್ರಗಳನ್ನು ರಾಜ್ಯ ಸರ್ಕಾರವು, ಪಡೆದುಕೊಂಡಿದೆಯೆಂಬುದನ್ನು ಒಪ್ಪಿಕೊಂಡಿದೆ. ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಹಿಂದೆ ಉಲ್ಲೇಖಿಸಲಾದ ಎಂದರೆ ದಿನಾಂಕ 26.11.1999 ಹಾಗೂ 16.12.1999ರ ಎರಡು ನಿರ್ದೇಶನಗಳನ್ನು ಕಾನೂನಿನಲ್ಲಿ ಸಮರ್ಥಿಸಿಕೊಳ್ಳಲಾಗದು ಎಂಬುದನ್ನು ಎತ್ತಿಹಿಡಿದಿದೆ. ಆದ್ದರಿಂದ ಅಪೀಲು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಮಾಡಲಾದ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯದ ವಿಭಾಗೀಯ

ಪೀಠದ ಆ ನಿರ್ದೇಶನಗಳನ್ನು ಹಾಗೂ ಮಾಡಲಾದ ಆಯ್ಕೆಗಳನ್ನು ರದ್ದುಗೊಳಿಸಲಾಗಿದೆ. ಈ ಅಪೀಲುಗಳನ್ನು ತದನುಸಾರವಾಗಿ ಪುರಸ್ಕರಿಸಲಾಗಿದೆ.

10. ನಿಯಮ 3(ಬಿ) ಅಡಿಯಲ್ಲಿ ನೀಡಲಾದ ಕೃಪಾಂಕವನ್ನು ಹೊರತುಪಡಿಸಿದ ನಂತರವೂ ಈ ಯಾವುದೇ ನೇಮಿಸಲ್ಪಟ್ಟ ವ್ಯಕ್ತಿಗಳನ್ನು ಅನ್ಯಥಾ ನೇಮಕಗೊಳಿಸಲು ಅರ್ಹತೆ ನೀಡಿದರೆ, ನೇಮಕ ಗೊಳ್ಳುತ್ತಿರುವುದರಿಂದ ಅವರನ್ನು ಹೊರಗಿಡಲು ಈ ತೀರ್ಪನ್ನು ಅನುಷ್ಠಾನಗೊಳಿಸದಿರುವುದು ನಮಗೆ ಸ್ಪಷ್ಟವಾಗುತ್ತದೆ".

12. ಮೇಲೆ ಓದಲಾದ ಆದೇಶವು, ಈ ನ್ಯಾಯಾಲಯದ ವಿಭಾಗೀಯ ಪೀಠವು ಅವರಿಗೆ ಒದಗಿಸಿದ ಸಂರಕ್ಷಣೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ರದ್ದುಗೊಳಿಸಿ ಮತ್ತು ಮಾನ್ಯ ಏಕಸದಸ್ಯಪೀಠ ನ್ಯಾಯಮೂರ್ತಿಗಳ ಆದೇಶವನ್ನು ಎತ್ತಿ ಹಿಡಿಯುವ ಮೂಲಕ ದಿನಾಂಕ 11.10.2001 ರಂದು ಅಭ್ಯರ್ಥಿಗಳ ಸೇವೆಯನ್ನು ಮುಕ್ತಾಯಗೊಳಿಸಲು ರಾಜ್ಯವು ಬಾದ್ಯವಾಗುತ್ತದೆಂಬುದನ್ನು ಸ್ಪಷ್ಟಪಡಿಸುತ್ತದೆ. ದಿನಾಂಕ:11.10.2010 ರಂದು ಹಾಗೂ ಅಂದಿನಿಂದ ಅರ್ಜಿದಾರರು ಪದದಲ್ಲಿ ಮುಂದುವರಿಯಲು ಸಾಧ್ಯವಾಗುವುದಿಲ್ಲ ಹಾಗೂ ಅವರ ನೇಮಕಾತಿಯು ಅದಕ್ಕೆ ಮೊದಲೇ ಶೂನ್ಯಗೊಳ್ಳುತ್ತದೆ.

13. ಆದಾಗ್ಯೂ, ರಾಜ್ಯ ಸರ್ಕಾರವು, ***ಎಸ್.ಶ್ರೀಧರರವರ*** ಪ್ರಕರಣದಲ್ಲಿ (ಮೇಲಿನ) ನಿರ್ಣಯವವನ್ನು ಅನುಷ್ಠಾನಗೊಳಿಸಿರುವುದಿಲ್ಲ. ಸದರಿ ಅಪೀಲುಗಳಲ್ಲಿ ಇದನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪಕ್ಷಕಾರರಿಗೆ ಮಾತ್ರ ನಿರ್ಬಂಧಿಸಲಾಗಿದೆ. ರಾಜ್ಯ ಸರ್ಕಾರದ ನಿಷ್ಕ್ರಿಯ ಕ್ರಮದಿಂದ ಬಾಧಿತರಾದ ಎಸ್.ಶ್ರೀಧರನೊಂದಿಗೆ ಸಹ-ಅರ್ಜಿದಾರರಲ್ಲಿ ಒಬ್ಬನಾಗಿದ್ದ ಜಿ.ಮಹಂತೇಶ್ ನಿಂದನೆ (ಸಿವಿಲ್) ಅರ್ಜಿ ಸಂ.370/2002ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದಾನೆ. ನಿಂದನೆ ವ್ಯವಹರಣೆಗಳ ಸಂಬಂಧದಲ್ಲಿ ನೋಟೀಸನ್ನು ಸ್ವೀಕರಿಸಿದ ನಂತರ ರಾಜ್ಯ ಸರ್ಕಾರವು,

ದಿನಾಂಕ 16.4.2002 ರಲ್ಲಿ, ಪೊಲೀಸು ಮಹಾ ನಿರ್ದೇಶಕ ಹಾಗೂ ಪೊಲೀಸು ಮಹಾ ನಿರೀಕ್ಷಕರಿಗೆ ಈ ಮುಂದಿನಂತೆ ಮಾಹಿತಿ ನೀಡುವ ಮೂಲಕ ನಿರ್ದೇಶಿಸಿತು:

> "ಹೇಗೇ ಆದಾಗ್ಯೂ, ದಿನಾಂಕ 26.11.2001ರ ತನ್ನ ತೀರ್ಪಿನಲ್ಲಿ, ಸರ್ವೋಚ್ಚ ನ್ಯಾಯಾಲಯವು, 11.10.2001ರ ತನ್ನ ತೀರ್ಪಿಗೆ ಸರ್ವೋಚ್ಚ ನ್ಯಾಯಾಲಯದ ಮುಂದಿನ ವ್ಯವಹರಣೆಗಳಲ್ಲಿ ಪಕ್ಷಕಾರರು ಬದ್ಧರಾಗಿರುವುದನ್ನು ಸ್ಪಷ್ಟಪಡಿಸಿದೆ. ಪ್ರಸ್ತುತ ಪ್ರಕರಣದಲ್ಲಿ, ಬರೀ 14 ಜನರು ಮಾತ್ರ ಸರ್ವೋಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಪೀಲುಗಳನ್ನು ಸಲ್ಲಿಸಿದ್ದಾರೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪಾಲಿಸಲು 14 ಜನರನ್ನು (ವ್ಯವಹಾರಗಳ ಪಕ್ಷಕಾರರು) ಪೊಲೀಸು ಸಬ್‌ಇನ್ಸ್‌ಪೆಕ್ಟರ್ ಆಗಿ (ಪಿ.ಎಸ್.ಐ) ನೇಮಕ ಮಾಡಲು ಅರ್ಹರಾಗಿದ್ದಾರೆಯೇ ಎಂದು ಪರೀಕ್ಷಿಸುವುದು ಅಗತ್ಯ"

14. ದಿನಾಂಕ 16.04.2002ರ ಸದರಿ ನಿರ್ದೇಶನವನ್ನು ಅನುಸರಿಸಿ ಪೊಲೀಸು ಮಹಾ ನಿರ್ದೇಶಕರು ಹಾಗೂ ಪೊಲೀಸು ಮಹಾ ನಿರೀಕ್ಷಕರು ಆಯ್ಕೆ ಪಟ್ಟಿಯ ಪಾರ್ಶ್ವಿಕ ಪರಿಶೀಲನೆಯನ್ನು ಮಾಡಿದರು ಹಾಗೂ ಅಂಥ ಪಾರ್ಶ್ವಿಕ ಪರಿಶೀಲನೆಯನ್ನು ಮಾಡಿದಂತೆ, ಕೆಲವು ಅಭ್ಯರ್ಥಿಗಳನ್ನು ಆಯ್ಕೆಪಟ್ಟಿಯಲ್ಲಿ ಸೇರಿಸಲು ಅರ್ಹರಾಗಿಲ್ಲವೆಂಬುದು ಹಾಗೂ ಅಂಥ ಅರ್ಜಿದಾರರ ಸೇವೆಯನ್ನು ಮುಕ್ತಾಯ ಗೊಳಿಸಬೇಕೆಂಬುದು ಕಂಡು ಬಂತು.

15. ***ಶ್ರೀ ಎಸ್. ಶ್ರೀಧರರವರ*** ಪ್ರಕರಣದಲ್ಲಿನ ತೀರ್ಪು ಗ್ರಾಮೀಣ ಕೃಪಾಂಕದ ಪ್ರಯೋಜನ ಪಡೆದುಕೊಂಡು ನೇಮಕಗೊಂಡ ವ್ಯಕ್ತಿಗಳ ನೇಮಕಾತಿಯನ್ನು ಸರ್ಕಾರವು ಅನ್ವಯಿಸಿದ್ದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳ ಪಕ್ಷಕಾರರಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ಇತರರಿಗೆ ಅನ್ವಯಿಸುವುದಿಲ್ಲವೆಂದು ಅವರನ್ನು ಮುಂದುವರಿಸಿದ್ದು, ಕೆಲವು ರಿಟ್ ಅರ್ಜಿಗಳನ್ನು, ಭಾರತ ಸಂವಿಧಾನದ

32ನೇ ಅನುಚ್ಛೇದದ ಮೇರೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ದಾಖಲ್ಮಾಡಬೇಕಾಯಿತು. ದಿನಾಂಕ 6.5.2003ರ (***ವಿಠಲ್ ಹಾಗೂ ಇತರರ*** ನಡುವೆ (2004) 10 ಎಸ್‌ಸಿಸಿ 162 ವರದಿ ಮಾಡಲಾದ) ತನ್ನ ತೀರ್ಪಿನಂತೆ ಸದರಿ ರಿಟ್ ಅರ್ಜಿಗಳನ್ನು ಪುರಸ್ಕರಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಘೋಷಿಸಿತು:

> "14. ನಾವು, ರಾಜ್ಯ ಸರ್ಕಾರದ, ಉಚ್ಚ ನ್ಯಾಯಾಲಯದ ಹಾಗೂ "ಮಧ್ಯಂತರ ನೇಮಿತರ" ನಿವೇದನೆಗಳನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಯಾರ ಸಂಬಂಧದಲ್ಲಿ ನೇಮಕಾತಿಯನ್ನು ಈ ನ್ಯಾಯಾಲಯವು, ವಿಭಾಗೀಯ ಪೀಠವು ಅವರನ್ನು ಸೇವೆಯಲ್ಲಿ ಮುಂದುವರಿಸಲು ಅನುಮತಿಸಬಾರದೆಂದು ಅಭಿಪ್ರಾಯಪಟ್ಟಿದೆಯೋ ಆ ವ್ಯಕ್ತಿಗಳನ್ನು ಅನುಮತಿಸುವ ಮೂಲಕ ದಿನಾಂಕ 11.10.2001 ರಂದು ನೀಡಲಾದ ಈ ನ್ಯಾಯಾಲಯದ ತೀರ್ಮಾನವನ್ನು ಅಸಿಂಧುವೆಂದು ನಿರೂಪಿಸಲು ಸಾಧ್ಯವಿಲ್ಲ. ನಂತರದ ಸ್ಪಷ್ಟೀಕರಣವನ್ನು, ಉಚ್ಚ ನ್ಯಾಯಾಲಯ ಹಾಗೂ ರಾಜ್ಯ ತಪ್ಪಾಗಿ ಗ್ರಹಿಸಿಕೊಂಡಿದ್ದರೆ, ನಾವು, ಯಾವ ಪುನರ್ ಪರಿಶೀಲನಾ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿತ್ತೋ ಆ ಪುನರ್ ಪರಿಶೀಲನಾ ಅರ್ಜಿಯ ಪುನರ್ ಪರಿಶೀಲನೆಯನ್ನು ವಾಸ್ತವವಾಗಿ ಪುರಸ್ಕರಿಸಿದೆಯೆಂದು ಅದನ್ನು ಸರಿಯಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಅದನ್ನು ದುರದೃಷ್ಟಕರ ಹಾಗೂ ಆಶ್ಚರ್ಯಪಡುವಂಥದ್ದೆಂದು ಭಾವಿಸುತ್ತೇವೆ ಹಾಗೂ ಸಂಪೂರ್ಣವಾಗಿ ವಿರುದ್ಧವಾದ ರೀತಿಯಲ್ಲಿ ಮರುನಿರ್ಧರಿಸಲಾಗಿದೆ. ನಿಯಮವು ಅಸಂವಿಧಾನಾತ್ಮಕವಾಗಿದೆಯೆಂದು ಭಾವಿಸಲಾಗಿದ್ದಲ್ಲಿ, ಪರಿಣಾಮಗಳನ್ನು ಎಲ್ಲಾ ಸೇವೆಗಳಿಗೆ ಅನ್ವಯಿಸಲೇ ಬೇಕು. ನಿಯಮವನ್ನು ಭಾಗಶ:ವಾಗಿ ಸರಿಯಾಗಿದೆಯೆಂದು ಹಾಗೂ ಭಾಗಶ:ವಾಗಿ ತಪ್ಪಾಗಿದೆಯೆಂದು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ನೇಮಕಾತಿಗಳನ್ನು ಈ ನ್ಯಾಯಾಲಯವು ನಿರ್ದಿಷ್ಟವಾಗಿ ಹಾಗೂ ವ್ಯಕ್ತವಾಗಿ ಸಂರಕ್ಷಿಸುವಷ್ಟರಮಟ್ಟಿಗೆ ಮಾತ್ರ, ನಿಯಮವನ್ನು ರದ್ದುಗೊಳಿಸುವುದನ್ನು, ಅನ್ಯಥಾ ಹಾಗೆ ಸಂರಕ್ಷಿಸಲ್ಪಡದ ಎಲ್ಲಾ ವ್ಯಕ್ತಿಗಳ ವಿರುದ್ಧ ಜಾರಿಗೊಳಿಸಲಾಗಿದೆ. ಆದ್ದರಿಂದ ‘‘ಮಧ್ಯಂತರ ನೇಮಿತರನ್ನು’’ ಸೇವೆಯಲ್ಲಿ ಮುಂದುವರಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಆದ್ದರಿಂದ ಎರಡನೇ ಅಧಿಸೂಚನೆಯನ್ನು ರದ್ದುಗೊಳಿಸಲಾಗಿದೆ.

15. XXXX XXXX XXXX XXXX

16. ಇತರ ಸೇವೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ರಾಜ್ಯವು ದಿನಾಂಕ 11.10.2001ರ ನ್ಯಾಯಾಲಯದ ಆದೇಶವನ್ನು ಅನುಸರಿಸದಿದ್ದರೆ ಅವು ಗಂಡಾಂತರವನ್ನು ಉಂಟುಮಾಡುತ್ತವೆ. ಪೊಲೀಸು ಸೇವೆಯ ಸಂಬಂಧದಲ್ಲಿ ಸರಿಯಾಗಿ ಹೇಳಿದ್ದರೆ, ರಿಟ್ ಅರ್ಜಿದಾರರು ರಿಟ್ ಅರ್ಜಿಯಲ್ಲಿ ಪೊಲೀಸ್ ಸೇವೆಗಳಿಗೆ ಸಂಬಂಧಪಟ್ಟಂತೆ ಹೇಳಿರುವುದು ಸರಿಯಾಗಿದೆ. ರಾಜ್ಯ ಸರ್ಕಾರವು ಈ ಸನ್ನಿವೇಶವನ್ನು ಸರಿಪಡಿಸಲು ಕೂಡಲೇ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದಂತೆ ಹಾಗೂ ದಿನಾಂಕ 11.10.2001ರ ಆದೇಶದಲ್ಲಿ ಇರುವಂತೆ ಆ ದಿನಾಂಕದಿಂದ ಎಂಟು ವಾರಗಳ ಅವಧಿಯೊಳಗೆ ಈ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಇದು ಮಾತ್ರ ರಿಟ್ ಅರ್ಜಿದಾರರಿಗೆ ಪರಿಹಾರವನ್ನು ನೀಡುವಂಥದ್ದಾಗಿದೆ. ಅವರಿಗೆ ಸಂಬಂಧಪಡುವಷ್ಟರಮಟ್ಟಿಗೆ, 3(ಬಿ) ನಿಯಮದ ಕಾರಣದಿಂದ ಏಕೆಂದರೆ ಅನ್ಯಥಾ, ಅನರ್ಹಗೊಂಡ ಅಭ್ಯರ್ಥಿಗಳನ್ನು ನೇಮಕಮಾಡಿದ್ದು ನೇಮಕಾತಿಗೆ ಅವರ ಪ್ರಕರಣವನ್ನು ಮಾತ್ರ ಪರಿಗಣಿಸಿದ್ದರೆ, ಹಾಗೂ ದಿನಾಂಕ 11.10.2001ರ ಈ ನ್ಯಾಯಾಲಯದ ತೀರ್ಮಾನದ ಕಾರಣದಿಂದ ಯಾವ ವರ್ಷದಲ್ಲಿ ಈ ರಿಟ್

ಅರ್ಜಿದಾರರು ಅರ್ಹರಾಗಿರುವರೋ ಆ ವರ್ಷದಲ್ಲಿ ಯಾವುದೇ ಖಾಲಿ ಹುದ್ದೆಗಳು ಉಂಟಾದರೆ, ಹಾಗೆ ಸೃಜನೆಯಾದ ಖಾಲಿ ಹುದ್ದೆಗಳಿಗೆ, ಅವರ ಬದಲಾಗಿ ಹಾಗೂ ಅರ್ಹತಾ ಪಟ್ಟಿಗೆ ಅನುಸಾರವಾಗಿ ರಿಟ್ ಅರ್ಜಿದಾರರು ನೇಮಕಗೊಳ್ಳಲು ಅರ್ಹರಾಗುವರು. ಈ ಪ್ರಯತ್ನವನ್ನು ಆ ದಿನಾಂಕದಿಂದ ಎಂಟು ವಾರಗಳ ಅವಧಿಯೊಳಗೆ ಜಾರಿಗೆ ತರತಕ್ಕದ್ದು. ಆದಾಗ್ಯೂ, ಯಾವುದೇ ರಿಟ್ ಅರ್ಜಿದಾರರನ್ನು, ನೇಮಕಾತಿಯ ಆದೇಶ ಹೊರಡಿಸಿದ ದಿನಾಂಕದಿಂದ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು (ಈ ರೀತಿ ಪರಿಣಾಮಕಾರಿಯಾಗುವುದು)".

16. ***ವಿಠಲ್‌ರವರ*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ದೃಷ್ಟಿಯಲ್ಲಿಟ್ಟುಕೊಂಡು, ದಿನಾಂಕ 2.7.2003ರ ಸುತ್ತೋಲೆ ಮೂಲಕ ರಾಜ್ಯ ಸರ್ಕಾರವು ಈ ಮುಂದಿನಂತೆ ಆಯ್ಕೆ ಹಾಗೂ ನೇಮಕಾತಿ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಿತು:

"(ಎ) ಗ್ರಾಮೀಣ ಕೃಪಾಂಕದ ಪ್ರಯೋಜನ ಪಡೆದುಕೊಂಡು ದಿನಾಂಕ 11.11.1998ರ ನಂತರ ನೇಮಕಗೊಂಡ ಎಲ್ಲಾ ಅಭ್ಯರ್ಥಿಗಳ ಆಯ್ಕೆಯನ್ನು ಪರಿಶೀಲಿಸುವುದು ಹಾಗೂ ಗ್ರಾಮೀಣ ಕೃಪಾಂಕದ ಪ್ರಯೋಜನವನ್ನು ಹೊರತುಪಡಿಸಿದ ಅವರ ಆಯ್ಕೆಪಟ್ಟಿಯನ್ನು ಮರುಪರಿಶೀಲಿಸಿದ ನಂತರ ಪರಿಷ್ಕೃತ ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

(ಬಿ) (ಎ) ನಿರ್ದೇಶನದ ಪ್ರಕಾರ ಪ್ರಕಟಗೊಂಡ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿನ ಸ್ಥಾನ ಪಡೆಯದಿರುವಂಥ ಅಭ್ಯರ್ಥಿಗಳ ಸೇವೆಯನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವುದು.

(ಸಿ) ತೆಗೆದುಹಾಕಲಾದ ಅಭ್ಯರ್ಥಿಗಳ ಸ್ಥಾನದಲ್ಲಿ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಅಭ್ಯರ್ಥಿಗಳನ್ನು ಭವಿಷ್ಯವರ್ತಿಯಾಗಿ ನೇಮಕ ಮಾಡುವುದು".

17. ಅದಕ್ಕೆ ಅನುಸಾರವಾಗಿ, ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿ ಆಯ್ಕೆ ಪಟ್ಟಿಯನ್ನು ಪುನ: ತಯಾರಿಸುವ ಮೂಲಕ ಪರಿಷ್ಕೃತ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ದಿನಾಂಕ 5.7.2003ರ ಅಧಿಸೂಚನೆಯನ್ನು ಪೊಲೀಸು ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರು ಹೊರಡಿಸಿದರು. ಸದರಿ ಆಯ್ಕೆ ಪಟ್ಟಿಯಲ್ಲಿ, ಅರ್ಜಿದಾರರು ತಮ್ಮ ಕಡಿಮೆ ಅರ್ಹತೆಯ ಕಾರಣದಿಂದ ಆಯ್ಕೆಗೆ ಅನರ್ಹರಾಗಿರುವುದು ಕಂಡು ಬಂತು ಹಾಗೂ ತದನುಸಾರವಾಗಿ ಅವರಿಗೆ ಸ್ಥಾನವನ್ನು ನೀಡಲಿಲ್ಲ. ಪರಿಣಾಮಕಾರಿಯಾಗಿ, ವಿಠಲ್ ಪ್ರಕರಣದಲ್ಲಿ (ಮೇಲಿನ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನನ್ನು ಅನುಷ್ಠಾನಗೊಳಿಸಿ, ಯಾವ ಅಭ್ಯರ್ಥಿಗಳ ಸೇವೆಯನ್ನು ಅಲ್ಲಿಯವರೆಗೆ ಮುಕ್ತಾಯಗೊಳಿಸಿರಲಿಲ್ಲವೋ ಆ ಅಭ್ಯರ್ಥಿಗಳ ಸೇವೆಯನ್ನು 5.7.2003 ಹಾಗೂ 21.7.2003ರ ನಡುವೆ ಮುಕ್ತಾಯಗೊಳಿಸಲಾಯಿತು.

18. ಪೊಲೀಸು ಸಬ್–ಇನ್ಸ್‌ಪೆಕ್ಟರ್ (ಸಿವಿಲ್) ಆಯ್ಕೆ ನೇಮಕಾತಿ ಸಮಿತಿಯು ದಿನಾಂಕ 4.9.2002ರ ಅಧಿಸೂಚನೆ ಮೂಲಕ ನೇರನೇಮಕಾತಿ ಮೂಲಕ ಪೊಲೀಸು ಸಬ್–ಇನ್ಸ್‌ಪೆಕ್ಟರ್ 360 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಯನ್ನು ಆಹ್ವಾನಿಸಿ, ಅವುಗಳ ಪೈಕಿ 36 ಹುದ್ದೆಗಳನ್ನು ಸೇವೆಯಲ್ಲಿದ್ದ ಅಭ್ಯರ್ಥಿಗಳಿಗಾಗಿ ಮೀಸಲಿಡಲಾಯಿತು. ಅರ್ಜಿದಾರರು ಮುಕ್ತ ಮಾರುಕಟ್ಟೆ ಪ್ರವರ್ಗದಿಂದ ಆಯ್ಕೆಯಾಗಲು ಅರ್ಜಿ ಸಲ್ಲಿಸಿದರು ಹಾಗೂ ಯಶಸ್ವಿಯಾಗಿ ಸ್ಥಾನ ಪಡೆದರು. ಆಯ್ಕೆಯ ಅನುಸಾರ, ಅರ್ಜಿದಾರರನ್ನು ದಿನಾಂಕ 27.8.2003ರ ಆದೇಶದ ಮೂಲಕ ಎಲ್ಲರನ್ನು ಆಯ್ಕೆ ಮಾಡಲಾಯಿತು. ಸದರಿ ಆದೇಶದ ಅನುಸಾರ, ಅರ್ಜಿದಾರರು ನಿಗದಿಪಡಿಸಲಾದ ಸಮಯದೊಳಗೆ ಸೇರ್ಪಡೆಯಾದರು ಹಾಗೂ ತಮ್ಮ ತೃಪ್ತಿಕರ ಕಾರ್ಯಸಾಧನೆಯ ಕಾರಣದಿಂದ ಅವರ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಘೋಷಿಸಲಾಯಿತು. ಅವರು ಸಬ್ ಇನ್ಸ್‌ಪೆಕ್ಟರ್ (ಸಿವಿಲ್) ಮುಂದಿನ ಉನ್ನತ

ಪದವೃಂದದ ಬಡ್ತಿಗೂ ಸಹ ಆಯ್ಕೆಯಾದರು. ಪೊಲೀಸು ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರು ದಿನಾಂಕ 11.05.2009ರಲ್ಲಿ ತಿಳಿಸಲಾದಂತೆ ಸಬ್ ಇನ್ಸ್‌ಪೆಕ್ಟರ್ (ಸಿವಿಲ್) ಪದವೃಂದಕ್ಕೆ ಬಡ್ತಿ ನೀಡಲು ಅವರ ಪ್ರಕರಣಗಳನ್ನು ಸೇವಾ ದಾಖಲೆಗಳಿಗೆ ಹಾಗೂ ಶಿಫಾರಸು ಪಟ್ಟಿಯನ್ನು ತರಿಸಿಕೊಂಡರು.

19. ರಾಜ್ಯ ಸರ್ಕಾರವು, ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ನೇಮಕಗೊಂಡಿದ್ದ ವ್ಯಕ್ತಿಗಳ ಸೇವೆಯನ್ನು ವಜಾಗೊಳಿಸಿತು. ಅದಾದನಂತರ, ರಾಜ್ಯ ಸರ್ಕಾರವು, 'ಕರ್ನಾಟಕ ಸಿವಿಲ್ ಸೇವೆಗಳು(ಗ್ರಾಮೀಣ ಕೃಪಾಂಕದ ಪ್ರಯೋಜನ ಪಡೆದ ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕಗೊಂಡ ವ್ಯಕ್ತಿಗಳ ವಿಲೀನತೆ) (ವಿಶೇಷ) ನಿಯಮಗಳು, 2003 (ಸಂಕ್ಷಿಪ್ತತೆಗಾಗಿ 'ವಿಶೇಷ ನಿಯಮಗಳು') ಎಂದು ಕರೆಯಲಾಗುವ ನಿಯಮಗಳನ್ನು ರೂಪಿಸಿ ದಿನಾಂಕ 12.11.2003 ರಂದು ಅಧಿಸೂಚನೆ ಹೊರಡಿಸಿತು. ಅಭ್ಯರ್ಥಿಗಳ ಸೇವೆಯು ವಜಾಗೊಳ್ಳುವ ಮೊದಲು ಪ್ರತಿಯೊಬ್ಬರೂ ಸಲ್ಲಿಸಲಾದ ಸೇವೆಯನ್ನು ವೇತನ ಹಾಗೂ ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲವೆಂದು ಆ ಆದೇಶಗಳಲ್ಲಿ ಸೂಚಿಸಿ ನೇರವಾಗಿ ದಿನಾಂಕ 21.11.2003ರ ಆದೇಶದ ಮೂಲಕ ಈ ನಿಯಮಗಳ ಮೇರೆಗೆ ಅವರನ್ನು ವಿಲೀನಗೊಳಿಸಲಾಯ್ತು. ಭಟ್ ವಿನೋದ್ ಮಂಜ (ಅಭ್ಯರ್ಥಿ ಸಂ.9) ಇವರ ಹೆಸರಿಗೆ ದಿನಾಂಕ 21.11.2003ರಲ್ಲಿ ನಿಯಮಗಳಿಗೆ ಅನುಸಾರವಾಗಿ ಹೊರಡಿಸಲಾದ ಅಂಥ ಒಂದು ನೇಮಕಾತಿ ಆದೇಶವನ್ನು ಈ ಮುಂದೆ ಉದ್ಧರಿಸಲಾಗಿದೆ.

"ಸಂ:05/ಇಆರ್‌ಸಿಟಿ/1995–96 ದಿನಾಂಕ: 21.11.2003.

**ಆದೇಶ**

ವಿಷಯ: ಪೊಲೀಸು ಉಪ ನಿರೀಕ್ಷಕರ (ಸಿವಿಲ್) ಹುದ್ದೆಗೆ ಅರ್ಹ ಅಭ್ಯರ್ಥಿಗಳ ವಿಲೀನತೆ.

ಉಲ್ಲೇಖ: 1. ಸಿವಿಲ್ ಅಪೀಲು ಸಂ:519 ಹಾಗೂ 560/2002 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ವಜಾ ಆದೇಶ ಸಂ.05/ಆರ್‌ಇಸಿಟಿ/1995–96, ದಿನಾಂಕ 11.7.2003.

2. ಸರ್ಕಾರಿ ಅಧಿಸೂಚನೆ ಸಂ:ಸಿಆಸುಇ.58.ಎಸ್‌ಆರ್‌ಆರ್. 2003, 12.11.2003.

– – –

ಉಲ್ಲೇಖ–1ರ ಪ್ರಕಾರ ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿದ ಆಯ್ಕೆ ಪಟ್ಟಿಯನ್ನು ಪರಿಶೀಲಿಸಿದ ನಂತರ ನೀವು – ಪೊಲೀಸು ಸಬ್‌ಇನ್ಸ್‌ಪೆಕ್ಟರ್ (ಸಿವಿಲ್) ಸೇವೆಯಲ್ಲಿ ಮುಂದುವರಿಯಲು ಅರ್ಹರಾಗಿರುವುದಿಲ್ಲ. ಆದ್ದರಿಂದ, ದಿನಾಂಕ 11.07.2003 ರಂದು ಪೊಲೀಸು ಸಬ್‌ಇನ್ಸ್‌ಪೆಕ್ಟರ್ ಸೇವೆಯಿಂದ (ಸಿವಿಲ್) ನಿಮ್ಮನ್ನು ವಜಾಗೊಳಿಸಲಾಗಿತ್ತು ಎಂಬುದು ತಿಳಿದುಬಂದಿರುತ್ತದೆ.

ಈಗ ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮದ, 1978ರ (1990ರ ಕರ್ನಾಟಕ ಅಧಿನಿಯಮ 14) 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಉಲ್ಲೇಖ–2 ರಲ್ಲಿರುವ ಕರ್ನಾಟಕ ಸಿವಿಲ್ ಸೇವಾ (ವಿಶೇಷ) ನಿಯಮಗಳು, 2003 ಎಂದು ಕರೆಯಲಾಗುವ ನಿಯಮವನ್ನು ಹೊರಡಿಸಿತು.

ಈ ನಿಯಮದ ಪ್ರಕಾರ ಈ ಮುಂದಿನ ಷರತ್ತುಗಳಿಗೊಳಪಟ್ಟು ನಿಮ್ಮನ್ನು ಪೊಲೀಸು ಉಪ ನಿರೀಕ್ಷಕರ (ಸಿವಿಲ್) ಹುದ್ದೆಗೆ ನಿಮ್ಮನ್ನು ವಿಲೀನಗೊಳಿಸಲಾಯಿತು:

1) ನಿಮ್ಮನ್ನು ವಜಾಗೊಳಿಸುವ ಮೊದಲು ನೀವು ಸಲ್ಲಿಸಿದ ಸೇವೆಯನ್ನು, ನಿಮ್ಮ ರಜೆ ಹಾಗೂ ನಿವೃತ್ತಿ ವೇತನವನ್ನು ನಿರ್ಧರಿಸಲು ಪರಿಗಣಿಸತಕ್ಕದ್ದು ಆದರೆ ವೇತನ ಹಾಗೂ ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲ.

2) ವೇತನವನ್ನು, ಯಾವ ಹುದ್ದೆಗೆ ನಿಮ್ಮನ್ನು ವಿಲೀನಗೊಳಿಸಲಾಗಿದೆಯೋ ಅದರ ಕನಿಷ್ಠ ಕಾಲಿಕವೇತನ ಶ್ರೇಣಿಯಲ್ಲಿ ನಿಗದಿಪಡಿಸತಕ್ಕದ್ದು.

ಆದ್ದರಿಂದ, ನಿಮ್ಮನ್ನು, 2003ರ ಡಿಸೆಂಬರ್ 1 ರಂದು ಅಥವಾ ಮೊದಲು ಕರ್ನಾಟಕ ರಾಜ್ಯ ಪೊಲೀಸು ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರ ಸಮಕ್ಷಮದಲ್ಲಿ ವರದಿ ಮಾಡಿಕೊಳ್ಳಲು ನಿರ್ದೇಶಿಸಲಾಗಿದೆ.

ಸಹಿ/–
(ಎಸ್.ರಾಮಕೃಷ್ಣ)
ಪೊಲೀಸು ಉಪ ಮಹಾನಿರೀಕ್ಷಕರು
(ಕೇಂದ್ರ ಕಚೇರಿ–1) ಹಾಗೂ ಸದಸ್ಯ
ಕಾರ್ಯದರ್ಶಿ
ಪೊಲೀಸು ಸಬ್ ಇನ್ಸ್‌ಪೆಕ್ಟರ್ (ಪಿಎಸ್ಐ)
ನೇಮಕಾತಿ ಸಮಿತಿ, ಬೆಂಗಳೂರು.

20. ಪೊಲೀಸು ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರು, ದಿನಾಂಕ 10.12.2007ರ ಅಧಿಸೂಚನೆ ಮೂಲಕ, 1.11.1956 ರಿಂದ 1.1.2005ರವರೆಗಿನ ಅವಧಿಯವರೆಗೆ ಪೊಲೀಸು ಸಬ್‌ಇನ್ಸ್‌ಪೆಕ್ಟರ್ (ಸಿವಿಲ್) ತಾತ್ಕಾಲಿಕ ಪರಿಶೀಲನಾ ಶ್ರೇಣೀಕೃತ ಪಟ್ಟಿಯನ್ನು ಪ್ರಕಟಿಸಿದರು. ಈ ಸದರಿ ತಾತ್ಕಾಲಿಕ ಪಟ್ಟಿಯಲ್ಲಿ, ಅರ್ಜಿದಾರರು, 27.08.2003ರಲ್ಲಿರುವಂತೆ ಅವರ ನೇಮಕಾತಿ ದಿನಾಂಕವನ್ನು

ತೋರಿಸುವ ಅಭ್ಯರ್ಥಿಗಳಿಗಿಂತ ಕೆಳಗಡೆ ಇದ್ದರು. ಇದೇ ಪಟ್ಟಿಯಲ್ಲಿ, ಅಭ್ಯರ್ಥಿಗಳ ನೇಮಕಾತಿ ದಿನಾಂಕವನ್ನು, ವಿಶೇಷ ನಿಯಮಗಳು ಜಾರಿಗೆ ಬಂದಿರುವ ಎಂದರೆ 12.11.2003 ರಲ್ಲಿರುವಂತೆ ತೋರಿಸಲಾಗಿತ್ತು. ತಾತ್ಕಾಲಿಕ ಶ್ರೇಣೀಕೃತ ಪಟ್ಟಿಯನ್ನು ಪ್ರಕಟಿಸಿದ ಅಧಿಸೂಚನೆಯಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಂದ ಆಹ್ವಾನಿಸಲಾಗಿತ್ತು. ಕೆಲವು ಅರ್ಜಿದಾರರು, ನಿಗದಿಪಡಿಸಿದ ಸಮಯದೊಳಗೆ ತಾತ್ಕಾಲಿಕ ಶ್ರೇಣೀಕೃತ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದರು ಹಾಗೂ ಕೆಲವು ವ್ಯಕ್ತಿಗಳು ಸಲ್ಲಿಸಲಿಲ್ಲ. ಆಕ್ಷೇಪಣೆಗಳನ್ನು ಪರಿಗಣಿಸುವ ಮೊದಲು ಹಾಗೂ ಅಂತಿಮ ಶ್ರೇಣೀಕೃತ ಪಟ್ಟಿಯನ್ನು ಪ್ರಕಟಿಸುವ ಮೊದಲು ದಿನಾಂಕ 10.12.2007ರ ಅಧಿಸೂಚನೆ ಮೂಲಕ ಪ್ರಕಟಿಸಲಾದ ತಾತ್ಕಾಲಿಕ ಶ್ರೇಣೀಕೃತ ಪಟ್ಟಿಯು ವಿವೇಚನಾಯುಕ್ತವಾಗಿಲ್ಲವೆಂದು ಹಾಗೂ ಕಾನೂನಿಗೆ ವಿರುದ್ಧವಾಗಿದೆಯೆಂದು ಘೋಷಿಸುವಂತೆ ಕೋರಿ ಹಾಗೂ ವಿಲೀನಗೊಳಿಸುವ ಮೊದಲು ತಾವು ಸಲ್ಲಿಸಿದ ಸೇವೆಯನ್ನು ತಮ್ಮ ನೇಮಕಾತಿಗೆ ಅನುಸಾರವಾಗಿ ಜ್ಯೇಷ್ಠತೆಗೆ ಲೆಕ್ಕ ಹಾಕಬೇಕೆಂದು ವಾದಿಸಿ ದಿನಾಂಕ 25.09.2008 ರಂದು ನ್ಯಾಯಾಧಿಕರಣದ ಮುಂದೆ ಅರ್ಜಿ ಸಂ:5140/2008 ಹಾಗೂ ಇತರ ಸಂಬಂಧಿತ ವಿಷಯಗಳನ್ನು ದಾಖಲು ಮಾಡಿದರು.

21. ನೋಟೀಸನ್ನು ಜಾರಿಗೊಳಿಸಿದ ನಂತರ, ಪೊಲೀಸು ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರು, ಅರ್ಜಿಗಳನ್ನು ವಿರೋಧಿಸುವ ಪ್ರತ್ಯುತ್ತರದ ವಿವರಣೆಯನ್ನು ದಿನಾಂಕ 27.7.2009 ರಂದು ಸಲ್ಲಿಸಿದರು.

22. ಮೇಲೆ ತಿಳಿಸಲಾದಂತೆ ನ್ಯಾಯಾಧಿಕರಣವು, ಈ ಮುಂದಿನಂತೆ ಅಭಿಪ್ರಾಯಪಡುವ ಮೂಲಕ 23.11.2009 ರಂದು ಅರ್ಜಿಗಳನ್ನು ಪುರಸ್ಕರಿಸಿತು:

**“ಆದೇಶ**

(1) ಅರ್ಜಿಗಳನ್ನು ಪುರಸ್ಕರಿಸಲಾಗಿದೆ;

(2) ಜ್ಯೇಷ್ಠತಾಪಟ್ಟಿಯನ್ನು ಅಂತಿಮಗೊಳಿಸಲು ಹಾಗೂ 1998/1999ನೇ ವರ್ಷದಲ್ಲಿ ಪೊಲೀಸು ಸಬ್‌ಇನ್ಸ್‌ಪೆಕ್ಟರ್ ತಮ್ಮ ಪ್ರಾರಂಭಿಕ ನೇಮಕಾತಿಯಾದ ದಿನಾಂಕದಿಂದ ಅವರ ಸೇವೆಯನ್ನು ಲೆಕ್ಕಹಾಕುವ ಮೂಲಕ ಸದರಿ ಪಟ್ಟಿಯಲ್ಲಿರುವ ಅರ್ಜಿದಾರರಿಗೆ ಯುಕ್ತ ದರ್ಜೆಯನ್ನು ನೀಡಲು ಹಾಗೂ 1998/1999ನೇ ವರ್ಷದಲ್ಲಾದ ತಮ್ಮ ಪ್ರಾರಂಭಿಕ ನೇಮಕಾತಿಯ ನಂತರ ನೇಮಕಗೊಂಡಿರುವವರಿಗೆ ಅರ್ಜಿದಾರರು ಜ್ಯೇಷ್ಠರೆಂದು ಪರಿಗಣಿಸುವ ಮೂಲಕ ಅವರಿಗೆ ಎಲ್ಲಾ ತತ್ಫಲವಾದ ಪ್ರಯೋಜನಗಳನ್ನು ನೀಡಲು ಪೊಲೀಸು ಮಹಾ ನಿರ್ದೇಶಕರಿಗೆ ನಿರ್ದೇಶಿಸಲಾಯಿತು;

(3) ಪೊಲೀಸು ಸಬ್‌ಇನ್ಸ್‌ಪೆಕ್ಟರ್ ಪ್ರಶ್ನಿತ ತಾತ್ಕಾಲಿಕ ಜ್ಯೇಷ್ಠತೆಯನ್ನು ಪೊಲೀಸು ಇನ್ಸ್‌ಪೆಕ್ಟರ್ ಪದವೃಂದದ ಬಡ್ತಿಯ ಉದ್ದೇಶಕ್ಕೆ ನಿರ್ವಹಿಸತಕ್ಕದ್ದಲ್ಲ. ಈ ಆದೇಶದ ಸಂಬಂಧದಲ್ಲಿ ಪೊಲೀಸು ಸಬ್‌ಇನ್ಸ್‌ಪೆಕ್ಟರ್ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ ನಂತರ ಪೊಲೀಸು ಸಬ್‌ಇನ್ಸ್‌ಪೆಕ್ಟರ್ ಪದವೃಂದದಿಂದ ಪೊಲೀಸು ಇನ್ಸ್‌ಪೆಕ್ಟರ್ ಪದವೃಂದಕ್ಕೆ ಬಡ್ತಿಗಳನ್ನು ನೀಡಬಹುದು.

(4) ಅನುಸರಣೆಯ ಕಾಲ : ಒಂದು ತಿಂಗಳು”

23. ಅಭ್ಯರ್ಥಿಗಳ ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲು ಹಾಗೂ 1998/1999ನೇ ವರ್ಷದಲ್ಲಿ ಪೊಲೀಸು ಸಬ್‌ಇನ್ಸ್‌ಪೆಕ್ಟರ್‌ರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ ಅವರ ಸೇವೆಯನ್ನು ಲೆಕ್ಕಹಾಕುವ ಮೂಲಕ ಹಾಗೂ 1998/1999ನೇ ವರ್ಷದಲ್ಲಿ ಆದ ಅವರ ಪ್ರಾರಂಭಿಕ ನೇಮಕಾತಿಯ ನಂತರ ನೇಮಕಗೊಂಡಿರುವವರಿಗೆ ಇವರು ಜ್ಯೇಷ್ಠರೆಂದು ಅವರನ್ನು ಭಾವಿಸುವ ಮೂಲಕ ಸದರಿ ಪಟ್ಟಿಯಲ್ಲಿ ಅವರಿಗೆ ಯುಕ್ತ ಸ್ಥಾನ ನೀಡಲು ಹಾಗೂ ಅವರಿಗೆ ಎಲ್ಲಾ ತತ್ಪರಿಣಾಮದ ಪ್ರಯೋಜನಗಳನ್ನು ನೀಡಲು ಪೊಲೀಸು ಮಹಾ ನಿರ್ದೇಶಕರು ಹಾಗೂ ಮಹಾ ನಿರೀಕ್ಷಕರನ್ನು ನಿರ್ದೇಶಿಸಲಾಗಿತ್ತು. ರಾಜ್ಯ ಹಾಗೆಯೇ ಅರ್ಜಿದಾರರು, ಈ ರಿಟ್ ಅರ್ಜಿಗಳಲ್ಲಿ ಸದರಿ ಆದೇಶವನ್ನು ಪ್ರಶ್ನಿಸಿದ್ದಾರೆ.

24. ನಾನು ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ನಾಗಪ್ರಸನ್ನ, ಅಭ್ಯರ್ಥಿಗಳ ಪರವಾಗಿ ಹಾಜರಾಗಿರುವ ಶ್ರೀ ವಿ.ಲಕ್ಷ್ಮಿನಾರಾಯಣ ಹಾಗೂ ರಾಜ್ಯದ ಪರವಾಗಿ ಹಾಜರಾಗಿರುವ ಶ್ರೀಮತಿ ಎಸ್.ಸುಶೀಲ ಇವರ ವಾದವನ್ನು ಆಲಿಸಿದ್ದೇನೆ.

25. ಮಾನ್ಯ ವಕೀಲರಾದ ಶ್ರೀ ನಾಗಪ್ರಸನ್ನರವರು ***ವಿಠಲ್*** ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ನಂತರ ಅಭ್ಯರ್ಥಿಗಳನ್ನು ವಜಾಗೊಳಿಸಲಾಯಿತು. ವಿಶೇಷ ನಿಯಮಗಳನ್ನು, ದಿನಾಂಕ 12.11.2003 ರಂದು ರೂಪಿಸಲಾಯಿತು. ಅವರು ಈ ನಿಯಮಗಳ ಕಡೆಗೆ ನಮ್ಮ ಗಮನ ಸೆಳೆಯುತ್ತಾ ***ವಿಠಲ್*** ಪ್ರಕರಣದಲ್ಲಿನ (ಮೇಲಿನ) ತೀರ್ಪಿಗೆ ಅನುಸಾರವಾಗಿ ಸೇವೆಯಿಂದ ವಜಾಗೊಳಿಸಲಾದವರನ್ನು ಮಾನವೀಯತೆಯನ್ನು ಪರಿಗಣಿಸುವ ಆಧಾರದ ಮೇಲೆ ಒಂದು ಬಾರಿ ಕ್ರಮದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿ ವಿಲೀನಗೊಳಿಸಲು 2ನೇ ನಿಯಮವು ಉದ್ದೇಶಿಸಿತ್ತೆಂದು ನಿವೇದಿಸಿದ್ದಾರೆ. 4(1)ನೇ ನಿಯಮವು, ನಿಯಮಗಳ ಮೇರೆಗೆ ವಿಲೀನಗೊಂಡ ವ್ಯಕ್ತಿಗಳು ಅಂಥ ವಿಲೀನತೆಯ ದಿನಾಂಕಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ ಹಾಗೂ ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲವೆಂಬುದನ್ನು ನಿರೂಪಿಸುತ್ತದೆ. ವಿಲೀನಗೊಂಡ ವ್ಯಕ್ತಿಗಳ ವೇತನವನ್ನು, ಅವರನ್ನು ಯಾವ ಹುದ್ದೆಗೆ ವಿಲೀನಗೊಳಿಸಲಾಗುವುದೋ ಆ ಹುದ್ದೆಯ ಕನಿಷ್ಠ ಕಾಲಿಕ ವೇತನ ಶ್ರೇಣಿಯನ್ನು ನಿಗದಿಪಡಿಸತಕ್ಕದ್ದೆಂದು ವಾದಿಸಲಾಗಿದೆ. ಎಲ್ಲಾ ಉದ್ದೇಶಗಳು ಹಾಗೂ ಆಶಯಗಳಿಗಾಗಿ, ರಜೆ ಹಕ್ಕು ಹಾಗೂ ನಿವೃತ್ತಿ ವೇತನವನ್ನು ನಿರ್ಧರಿಸುವುದನ್ನು ಹೊರತುಪಡಿಸಿ, ನಿಯಮಗಳ ಮೇರೆಗೆ ವಿಲೀನಗೊಂಡ ವ್ಯಕ್ತಿಗಳನ್ನು ವಿಶೇಷ ನಿಯಮಗಳ 3ನೇ ನಿಯಮದ ಮೇರೆಗೆ ನೇಮಕಾತಿ ಆದೇಶವನ್ನು ಹೊರಡಿಸಿದ ಮೇಲೆ ಮೊದಲ ಬಾರಿಗೆ ಅವರು ಸೇವೆಗೆ ಸೇರಿದ್ದಿದ್ದರೆ ಹೇಗೋ ಹಾಗೆ, ಮೊದಲಿನ ದಿನದ ಹಾಗೆ ಅಲ್ಲ ಎಂದು ಭಾವಿಸಬೇಕಾಗುತ್ತದೆ. ಅಭ್ಯರ್ಥಿಗಳು ವಿಶೇಷ ನಿಯಮಗಳ ಸಿಂಧುತ್ವವನ್ನಾಗಲಿ ಅಥವಾ ಅವರ ನೇಮಕಾತಿಯ ಆದೇಶದ ಸ್ಥಿತಿ ಯಾವುದಾಗಿತ್ತು ಎಂಬುದನ್ನಾಗಲಿ ಅವರು ಪ್ರಶ್ನಿಸಿಲ್ಲ. ಅರ್ಜಿದಾರರನ್ನು 27.08.2003 ರಂದು ಖಾಯಂ ಆಗಿ ನೇಮಕ ಮಾಡಲಾಗಿದೆ.

ಅಭ್ಯರ್ಥಿಗಳು, ಅವರು ವಜಾಗೊಳ್ಳುವ ಮೊದಲು ಅವರು ಸಲ್ಲಿಸಿದ ಸೇವೆಯನ್ನು ವೇತನ ಹಾಗೂ ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲವೆಂಬುದನ್ನು ಆ ಆದೇಶಗಳಲ್ಲಿ ನೇರವಾಗಿ ತಿಳಿಸಿದ್ದು 21.11.2003ರ ಆದೇಶದ ಮೂಲಕ ಅವರನ್ನು ವಿಲೀನಗೊಳಿಸಲಾಯಿತು. ಆದ್ದರಿಂದ, ಅರ್ಜಿದಾರರಿಗೆ ಜ್ಯೇಷ್ಠರೆಂದು ಅವರನ್ನು ಪರಿಗಣಿಸಬಹುದಾದ ಕಲ್ಪನೆಯನ್ನು ಮಾಡಲಾಗುವುದಿಲ್ಲ. ಜ್ಯೇಷ್ಠತೆಯೆಂಬುದು ಮೂಲಭೂತ ಹಕ್ಕಲ್ಲವೆಂದು, ಇದು ನಾಗರಿಕ ಹಕ್ಕು ಮಾತ್ರವೆಂದು. ಅವರು ವಾದಿಸಿದ್ದಾರೆ.

26. ರಾಜ್ಯದ ಪರವಾಗಿ ಹಾಜರಾಗಿರುವ ಮಾನ್ಯ ಎಜಿಎ ರವರು, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಬೆಂಬಲಿಸಿದರು. ದಿನಾಂಕ 12.11.2003ರ ನಿಯಮಗಳು ಪರಿಹಾರಕ ಶಾಸನವಲ್ಲ ಎಂಬುದು ಆಕೆಯ ನಿವೇದನೆಯಾಗಿದೆ. ಇದು 12.11.2003 ರಂದು ಮಾತ್ರ ಜಾರಿಗೆ ಬಂದಿದ್ದು ಅಭ್ಯರ್ಥಿಗಳ ನೇಮಕಾತಿಯ ನಿಯಮಗಳಲ್ಲಿ ಹೇಳಲಾದ ಹಾಗೆಯೇ ನೇಮಕಾತಿಯ ಆದೇಶದಲ್ಲಿ ವಿಧಿಸಲಾದ ನಿಬಂಧನೆಗಳು ಹಾಗೂ ಷರತ್ತುಗಳಿಗೆ ಒಳಪಟ್ಟಿರುತ್ತದೆ; ಆದ್ದರಿಂದ ಆಯ್ಕೆ ಪಟ್ಟಿಯಲ್ಲಿರುವ ಅರ್ಜಿದಾರರನ್ನು ಮೇಲಿನ ಸ್ಥಾನದಲ್ಲಿ ಇರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ಅವರು ಅರ್ಜಿದಾರರ ನಂತರ ಹಾಗೂ ಮೇಲೆ ಜ್ಯೇಷ್ಠತೆಯನ್ನು ಕ್ಲೇಮು ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ, 3ನೇ ನಿಯಮವನ್ನು ಪ್ರತ್ಯೇಕವಾಗಿ ಓದಿಕೊಳ್ಳಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ಸಂಪೂರ್ಣ ನಿಯಮಗಳನ್ನೂ, ಸರಿಯಾದ ಅಂತ್ಯವನ್ನು ತಲುಪುವ ಸಲುವಾಗಿ ಒಟ್ಟಿಗೆ ಓದಿಕೊಳ್ಳಬೇಕಾಗುತ್ತದೆ. ನಿಯಮಗಳನ್ನು ಅರ್ಜಿದಾರರು ಪ್ರಶ್ನಿಸಿರುವುದಿಲ್ಲ ಅಥವಾ ಅವರ ವಜಾ ಹಾಗೂ ನೇಮಕಾತಿ ಆದೇಶವನ್ನು ಪ್ರಶ್ನಿಸಿರುವುದಿಲ್ಲವೆಂದು ಪುನರುಚ್ಛರಿಸಿದ್ದಾರೆ.

27. ಮತ್ತೊಂದು ಕಡೆ, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಶ್ನಿತ ಆದೇಶವನ್ನು ಸಮರ್ಥಿಸಲು ಕೋರಿದ್ದಾರೆ. ಅವರು, ವಿಶೇಷ ನಿಯಮಗಳು ನಿರ್ದಿಷ್ಟವಾಗಿ 3ನೇ ನಿಯಮದ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ.

ಮಾನ್ಯ ವಕೀಲರ ಪ್ರಕಾರ, ಅಭ್ಯರ್ಥಿಗಳನ್ನು ಸೇವೆಗೆ ವಿಲೀನಗೊಳಿಸಲಾಗಿದೆ. ವಿಲೀನತೆಯ ನಿಯಮವು, ಮಾನ್ಯ ಏಕಸದಸ್ಯ ಪೀಠವು ಗುರುತಿಸಿದಂಥ ವಿಭಾಗೀಯ ಪೀಠವು ಎತ್ತಿಹಿಡಿಯಲಾಗಿರುವ ಕೊರತೆಯನ್ನು ನೀಗಲು ಶಾಸನದ ಮೂಲಕ ಪ್ರಯತ್ನಿಸಿದೆ. ವಿಶೇಷ ನಿಯಮಗಳು, ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ ಪ್ರಯೋಜನದ ಹಕ್ಕನ್ನು ವಿಸ್ತರಿಸುವ ವಿಲೀನತೆಯ ಸ್ವರೂಪದಲ್ಲಿವೆ. 3ನೇ ನಿಯಮವು, ವಿಲೀನತೆಯ ಎರಡು ಪ್ರವರ್ಗಗಳನ್ನು ಕಲ್ಪಿಸುತ್ತದೆ. ವಜಾಗೊಂಡ ದಿನಾಂಕಕ್ಕೆ ಮೊದಲು ಅವರು ಹೊಂದಿದ್ದ ಹುದ್ದೆಗೆ ಪ್ರತಿಯಾಗಿ ವಿಲೀನಗೊಳಿಸುವುದು ಮೊದಲನೇ ಪ್ರವರ್ಗ. ಅಧಿಕ ಹುದ್ದೆಗಳಿಗೆ ಪ್ರತಿಯಾಗಿ ವಿಲೀನಗೊಳಿಸಿದ ವ್ಯಕ್ತಿಗಳು ಎರಡನೇ ಪ್ರವರ್ಗ. ಅಭ್ಯರ್ಥಿಗಳು ಮೊದಲ ಪ್ರವರ್ಗದ ಅಡಿಯಲ್ಲಿ ಬರುತ್ತಾರೆ. 4(1)ನೇ ನಿಯುಮವು, ವಿಲೀನತೆಯು ಎರಡನೇ ಪ್ರವರ್ಗವನ್ನು ಮಾತ್ರ ವಿನಿಯಮಿಸುತ್ತಿದ್ದು ಅದು ಪ್ರಸ್ತುತ ಮುಂದಿರುವ ಪ್ರಕರಣವನ್ನು ವಿನಿಯಮಿಸಿರುವುದಿಲ್ಲ. 4(1)ನೇ ನಿಯಮವು, 3ನೇ ನಿಯಮದ ಮೇರೆಗೆ ಅಭ್ಯರ್ಥಿಗಳಿಗೆ ಪ್ರದತ್ತ ಮಾಡಿದ ಪ್ರಯೋಜನವನ್ನು ಅನೂರ್ಜಿತಗೊಳಿಸಲು ಸಾಧ್ಯವಾಗುವುದಿಲ್ಲ. ***ವಿಠಲ್*** ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಅನುಸಾರವಾಗಿ ವಜಾಗೊಳಿಸಿದ್ದರೂ ಸಹ, ಅವರು ವಿಲೀನಗೊಳ್ಳುವವರೆಗೆ ಸೇವೆಯಲ್ಲಿ ಅವರು ಮುಂದುವರಿದಿದ್ದರು. ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣವು ಹೊರಡಿಸಿದ ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಹಾಗೆ ವಜಾಗೊಳಿಸಲು ಹೇಳಲಾದ ದಿನಾಂಕದ ನಂತರವೂ ಸಹ ವಾಸ್ತವವಾಗಿ ಅವರು ವಿಲೀನಗೊಳ್ಳುವವರೆಗೆ ಸೇವೆಯಲ್ಲಿ ಮುಂದುವರಿದಿದ್ದರು. ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಅರ್ಜಿದಾರರು ಸಲ್ಲಿಸಿದ ಸೇವೆಯನ್ನು ತೆಗೆದುಹಾಕಲು ಸಾಧ್ಯವಾಗುವುದಿಲ್ಲ. ಹಾಗಾಗಿ ಅವರು ರಿಟ್ ಅರ್ಜಿಗಳನ್ನು ವಜಾಗೊಳಿಸಲು ಕೋರಿದ್ದರು.

28. ರಿಟ್ ಅರ್ಜಿ ಸಂ.35770 ಯಿಂದ 35775/2009 ಹಾಗೂ 35943 ರಿಂದ 35954/1999ರಲ್ಲಿ ಪ್ರತಿವಾದಿಗಳಾದ 7 ರಿಂದ 9ನೇ ಸಂಖ್ಯೆಯ ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀ ಡಿ.ಎನ್.ನಂಜುಂಡರೆಡ್ಡಿಯವರು, ಏನೇ ಆಗಲಿ, ಅಂತಿಮ ಆಯ್ಕೆ ಪಟ್ಟಿಯಲ್ಲಿ

ಅರ್ಜಿದಾರರ ಕೆಳಗೆ ಅಭ್ಯರ್ಥಿಗಳನ್ನು ತರಬಾರದೆಂದು ನಿವೇದಿಸಿದ್ದಾರೆ. ಅವರು, ಅವರ ಜ್ಯೇಷ್ಠತೆಯನ್ನು ಕನಿಷ್ಠಪಕ್ಷ ***ಶ್ರೀಧರರವರ*** ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿದ ದಿನಾಂಕದಿಂದ ಎಂದರೆ 11.10.2001 ರಿಂದ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ನಿವೇದಿಸಿದ್ದಾರೆ.

29. ನಾವು, ನ್ಯಾಯಸ್ಥಾನದಲ್ಲಿ ಮಾಡಲಾದ ಮಾನ್ಯ ವಕೀಲರ ವಾದಗಳನ್ನು ಎಚ್ಚರಿಕೆಯಿಂದ ಗಮನಿಸಿದ್ದೇವೆ ಹಾಗೂ ದಾಖಲೆಗಳಲ್ಲಿ ಇಡಲಾದ ಸಾಮಗ್ರಿಗಳನ್ನು ಅವಲೋಕಿಸಿದ್ದೇವೆ.

30. ಅರ್ಜಿಗಳನ್ನು ಪುರಸ್ಕರಿಸುವಾಗ ನ್ಯಾಯಾಧಿಕರಣವು, ಆಗ ಜಾರಿಯಲ್ಲಿದ್ದ ನಿಯಮಗಳಿಗೆ ಅನುಸಾರವಾಗಿ ಸಕ್ಷಮ ಪ್ರಾಧಿಕಾರವು, ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಮಾಡಿತ್ತೆಂದು ಅಭಿಪ್ರಾಯಪಟ್ಟಿದೆ. ಸರ್ವೋಚ್ಚ ನ್ಯಾಯಾಲಯವು, ಗ್ರಾಮೀಣ ಕೃಪಾಂಕಕ್ಕೆ ಸಂಬಂಧಪಟ್ಟ ನಿಯಮವನ್ನು ಅಸಂವಿಧಾನಿಕವೆಂದು ಘೋಷಿಸಿದ ಸಮಯದಲ್ಲಾಗಲೇ ಅಭ್ಯರ್ಥಿಗಳನ್ನು ಆಯ್ಕೆಮಾಡಿ ನೇಮಕಗೊಳಿಸಲಾಗಿತ್ತು ಹಾಗೂ ಅವರ ಸೇವೆಯ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವೆಂದೂ ಸಹ ಘೋಷಿಸಲಾಗಿತ್ತು. ಅಸಂವಿಧಾನಿಕ ನಿಯಮವನ್ನು ರೂಪಿಸಿರುವ ಸರ್ಕಾರದ ತಪ್ಪಿಗೆ ನಿಯಮಗಳ ಫಲಾನುಭವಿಗಳಾಗಿರುವ ಅಭ್ಯರ್ಥಿಗಳಂಥ ವ್ಯಕ್ತಿಗಳನ್ನು ದಂಡಿಸುವುದು ನ್ಯಾಯಸಮ್ಮತವಲ್ಲ. ಅವರು ನೌಕರರಾದ ತಪ್ಪಿಗೆ ನೌಕರರನ್ನು ದಂಡಿಸುವುದು ಬೇಕಾಬಿಟ್ಟಿ ಕ್ರಮ ಕೈಗೊಂಡಂತಾಗುತ್ತದೆ. ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸುವಿಕೆಯು ಕಾಲ್ಪನಿಕ ಅಷ್ಟೆ, ವಿಲೀನಗೊಳಿಸುವಿಕೆಯ ಮೊದಲು ಸಲ್ಲಿಸಲಾದ ಸೇವೆ ಕಾಲ್ಪನಿಕ ಅಲ್ಲ ಆದರೆ ಜ್ಯೇಷ್ಠತೆಯ ಉದ್ದೇಶಕ್ಕೆ ಮಧ್ಯಂತರ ಅವಧಿಯನ್ನು ಲೆಕ್ಕಹಾಕಬೇಕಾಗುತ್ತದೆ. ಸಮನ್ಯಾಯಕ್ಕೆ ಸುಸಂಗತವಾದ ಸಾಮಾನ್ಯ ನಿಯಮ ಏನೆಂದರೆ, ಇರುವ ಖಾಯಮಾತಿಯ ರೂಪದಲ್ಲಿ ಅಸ್ಥಿರತೆಗಳಿಲ್ಲದಿದ್ದರೆ ಸೇವೆಯ ಖಾಯಮಾತಿಯು ಜ್ಯೇಷ್ಠತೆಯೊಂದಿಗೆ ಸಂಬಂಧ ಹೊಂದುವ ಮೊದಲೂ ಸಹ ಸ್ಥಾನಾಪನ್ನ ಸೇವೆಯಾಗುತ್ತದೆ. ಹುದ್ದೆಯ

ಸ್ಥಾನಾಪನ್ನ ಸೇವೆಯು ಸಾಮಾನ್ಯ ಆಧಾರದ ಮೇಲಿನ ಸೇವೆಯಂತೆಯೇ ಉತ್ತಮ ಆಗಿರುತ್ತದೆ.

31. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಹಾಗೂ ಮಾನ್ಯ ಎಜಿಎ ರವರು, ಈ ಪ್ರಕರಣದ ವಾಸ್ತವಿಕ ಹಿನ್ನೆಲೆಯನ್ನು ಗಮನಿಸಿ ಈ ಕಾರಣ ನೀಡುವುದನ್ನು ಅವರು ಒಪ್ಪುವುದಿಲ್ಲ.

32. ಮೇಲೆ ಗಮನಿಸಲಾದಂತೆ, ಮಾನ್ಯ ಏಕಸದಸ್ಯ ಪೀಠವು, ರಿಟ್ ಅರ್ಜಿ ಸಂ.13157 ರಲ್ಲಿ, 3–ಬಿ ನಿಯಮವು ಅಸಂವಿಧಾನಿಕವೆಂದು ಅಭಿಪ್ರಾಯಪಟ್ಟು ದಿನಾಂಕ 11.11.1998 ರಂದು ಇತ್ಯರ್ಥಪಡಿಸಿತು, ಅದು, ಮತ್ತೆ ಸದರಿ ಆಜ್ಞೆಯಲ್ಲಿ ಮಾಡಲಾದ ಘೋಷಣೆಯಲ್ಲಿ ಏನೇ ಇದ್ದರೂ, ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ಈಗಾಗಲೇ ಮಾಡಲಾದ ವ್ಯಕ್ತಿಗಳ ನೇಮಕಾತಿ ಹಾಗೂ ಅವರ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ತೊಂದರೆ ಮಾಡಬಾರದೆಂದು ಹಾಗೂ ಸದರಿ ತೀರ್ಪಿನಿಂದ ಅವರ ನೇಮಕಾತಿಗೆ ವ್ಯತಿರಿಕ್ತ ಪರಿಣಾಮ ಉಂಟಾಗಬಾರದೆಂದು ಅಭಿಪ್ರಾಯಪಟ್ಟಿರುತ್ತದೆ. ಮಾನ್ಯ ಏಕಸದಸ್ಯಪೀಠದ ನ್ಯಾಯಾಧೀಶರ ಈ ದೃಷ್ಟಿಕೋನವನ್ನು ವಿಭಾಗೀಯ ಪೀಠವು ಎತ್ತಿಹಿಡಿದಿದೆ. ಆದಾಗ್ಯೂ, ವಿಭಾಗೀಯ ಪೀಠವು ಹೊರಡಿಸಿದ ಮಧ್ಯಂತರ ಆದೇಶಗಳಿಗೆ ಅನುಸಾರವಾಗಿ, ಬೇರೆ ಬೇರೆ ದಿನಾಂಕಗಳಂದು ಅಭ್ಯರ್ಥಿಗಳನ್ನು ನೇಮಕ ಮಾಡಲಾಯಿತು. ವಿಭಾಗೀಯ ಪೀಠವು, ಅವರ ನೇಮಕಾತಿಗಳನ್ನೂ ಸಹ ರಕ್ಷಿಸಿತು. ಆದಾಗ್ಯು, ***ಶ್ರೀಧರ್‌ರವರ*** ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯವು, ರಿಟ್ ಅಪೀಲಿನಲ್ಲಿ ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಮಾಡಲಾದ ನೇಮಕಾತಿಗಳನ್ನು ರಕ್ಷಿಸುವಷ್ಟರಮಟ್ಟಿಗೆ ವಿಭಾಗೀಯ ಪೀಠದ ಸದರಿ ಆದೇಶವನ್ನು ತಿರಸ್ಕರಿಸಿದೆ.

33. ಪರಿನಿಯಮವನ್ನು ಅಸಂವಿಧಾನಿಕವೆಂದು ನಿರ್ಣಯಿಸಿದಲ್ಲಿ, ಅದನ್ನು ಜಾರಿಗೆ ತರದಿದ್ದರೆ ಹೇಗಿರುತ್ತಿತ್ತೋ ಹಾಗೆ ಇರುತ್ತಿತ್ತು ಎಂಬುದು ವೇದ್ಯವಾದುದಾಗಿದೆ. ಅದರಡಿಯಲ್ಲಿ ಹಕ್ಕುಗಳನ್ನು ರೂಪಿಸಲು ಸಾಧ್ಯವಾಗುವುದಿಲ್ಲ; ಅವರ ಪರಿಗಣನೆಗಾಗಿ

ಅದನ್ನು ಆಧರಿಸಿದ ಕರಾರುಗಳು ಶೂನ್ಯವಾಗುತ್ತವೆ. 3–ಬಿ ನಿಯಮವನ್ನು ಅಸಂವಿಧಾನಿಕವೆಂದು ಘೋಷಿಸಿದ ಕೂಡಲೇ ಅದರ ಪರಿಣಾಮಗಳು ಎಲ್ಲಾ ಸೇವೆಗಳಿಗೆ ಅನ್ವಯವಾಗಲೇಬೇಕು. ಹಾಗಾಗಿ ಮಾನ್ಯ ಏಕಸದಸ್ಯ ಪೀಠವು, ಅವರನ್ನು ರಕ್ಷಿಸುವುದರಿಂದ ನಿಯಮವು ವಜಾಗೊಂಡವರೆಗೆ ಈಗಾಗಲೇ ಮಾಡಲಾದ ನೇಮಕಾತಿಗಳನ್ನು ಹೊರತುಪಡಿಸಿ ಅಂಥ ನಿಯಮಗಳ ಆಧಾರದ ಮೇಲೆ ಮಾಡಲಾದ ಎಲ್ಲಾ ಆಯ್ಕೆಗಳು ಶೂನ್ಯವಾಗುತ್ತವೆ. ***ಶ್ರೀಧರರವರ*** ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯವು, ಅಪೀಲನ್ನು ಇತ್ಯರ್ಥಪಡಿಸುವ ಅವಧಿಯಲ್ಲಿ ಮಾಡಲಾದ ನೇಮಕಾತಿಗಳ ಸಂಬಂಧದಲ್ಲಿ ವಿಭಾಗೀಯ ಪೀಠದ ನಿರ್ದೇಶನಗಳನ್ನು ತಳ್ಳಿಹಾಕುವಾಗ ಮಾನ್ಯ ಏಕಸದಸ್ಯ ಪೀಠದ ಅಭಿಪ್ರಾಯವನ್ನು ಎತ್ತಿ ಹಿಡಿದಿದೆ. ***ವಿಠಲ್‌ರವರ*** ಪ್ರಕರಣದಲ್ಲಿ (ಮೇಲಿನ) ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪೊಲೀಸು ಮಹಾನಿರ್ದೇಶಕರು ಹಾಗೂ ಮಹಾನಿರೀಕ್ಷಕರ ಸದರಿ ಅಭಿಪ್ರಾಯವನ್ನು ಪುನರುಚ್ಚರಿಸಿದೆ ಆದ್ದರಿಂದ ಗ್ರಾಮೀಣ ಕೃಪಾಂಕವನ್ನು ಹೊರತುಪಡಿಸಿ ಆಯ್ಕೆಪಟ್ಟಿಯನ್ನು ಪುನ: ರಚಿಸುವ ಮೂಲಕ ಪರಿಷ್ಕೃತ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ದಿನಾಂಕ 5.7.2003ರ ಅಧಿಸೂಚನೆಯನ್ನು ಹೊರಡಿಸಿದೆ. ಅಭ್ಯರ್ಥಿಗಳು ಆಯ್ಕೆಗೆ ಅನರ್ಹರೆಂದು ಕಂಡುಬರುತ್ತಾರೆ. ಅದಕ್ಕೋಸ್ಕರ ಅವರ ಹೆಸರು ಸದರಿ ಪಟ್ಟಿಯಲ್ಲಿ ಸ್ಥಾನ ಉಳಿಸಿಕೊಂಡಿಲ್ಲ. ಅರ್ಜಿದಾರರು ದಿನಾಂಕ 4.09.2002ರ ಅಧಿಸೂಚನೆಗನುಸಾರವಾಗಿ ಪ್ರಶ್ನಿತ ಹುದ್ದೆಗೆ ನೇಮಕಗೊಂಡರು ಹಾಗೂ ನೇಮಕಾತಿ ಆದೇಶವನ್ನು 27.08.2003 ರಲ್ಲಿ ಹೊರಡಿಸಲಾಗಿತ್ತು. ***ಶ್ರೀಧರರವರ*** ಪ್ರಕರಣದಲ್ಲಿ (ಮೇಲಿನ) ರಾಜ್ಯ ಸರ್ಕಾರವು, ಕಾನೂನನ್ನು ಘೋಷಿಸುವ ಬದಲು, ಶೂನ್ಯ ನೇಮಕಾತಿಗಳನ್ನು ರದ್ದುಗೊಳಿಸಲು ಎರಡು ವರ್ಷಗಳನ್ನು ತೆಗೆದುಕೊಂಡಿದೆ ಹಾಗೂ ಗ್ರಾಮೀಣ ಕೃಪಾಂಕದ ಆಧಾರದ ಮೇಲೆ ಕಾನೂನುಬಾಹಿರವಾಗಿ ನೇಮಕಗೊಂಡಿರುವ ಅಭ್ಯರ್ಥಿಗಳ ವಜಾ ಆದೇಶಗಳನ್ನು ಹೊರಡಿಸಿದೆ. ಅಭ್ಯರ್ಥಿಗಳನ್ನು ದಿನಾಂಕ 12.11.2003ರ ಸದರಿ ನಿಯಮಗಳಿಗೆ ಅನುಸಾರವಾಗಿ ವಿಲೀನಗೊಳಿಸಲಾಗಿತ್ತು. ಅಭ್ಯರ್ಥಿಗಳ ನೇಮಕಾತಿ ಆದೇಶವು, ಅವರು ತಾವು ವಜಾಗೊಳ್ಳುವ ಮೊದಲು ಅವರು ಸಲ್ಲಿಸಿದ ಸೇವೆಯನ್ನು ರಜೆ ಹಾಗೂ ನಿವೃತ್ತಿ ವೇತನವನ್ನು ನಿರ್ಧರಿಸಲು ಪರಿಗಣಿಸತಕ್ಕದ್ದೆಂದು ಹಾಗೂ ಅವರ ವೇತನ ಹಾಗೂ

ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲವೆಂಬ ಷರತ್ತಿಗೊಳಪಟ್ಟು ಅವರನ್ನು ನೇಮಕ ಮಾಡಿಕೊಳ್ಳಲಾಗಿತ್ತೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ, ಅಭ್ಯರ್ಥಿಗಳು ಯಾವುದೇ ತಪ್ಪನ್ನು ಮಾಡದಿರುವುದರಿಂದ ಹಾಗೂ ಅವರ ನೇಮಕಾತಿಯನ್ನು ಆಗ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಮಾಡಲಾಗಿತ್ತಾದ್ದರಿಂದ ಅವರನ್ನು ಶಿಕ್ಷಿಸಬಾರದೆನ್ನುವ ಅಭಿಪ್ರಾಯವನ್ನು ಎತ್ತಿ ಹಿಡಿಯುವುದನ್ನು ನ್ಯಾಯಾಧಿಕರಣವು ಸಮರ್ಥಿಸಿಕೊಂಡಿಲ್ಲ.

34. ವಿಶೇಷ ನಿಯಮಗಳು ಸ್ವರೂಪದಲ್ಲಿ ಪರಿಹಾರಕವಾಗಿವೆಯೇ ಹಾಗೂ ಅವರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ ಸರಿಯಾಗಿ ಅಭ್ಯರ್ಥಿಗಳಿಗೆ ಪ್ರಯೋಜನವನ್ನು ವಿಸ್ತರಿಸಿವೆಯೇ? ಎಂಬ ಪ್ರಶ್ನೆ ನಮ್ಮ ಮುಂದೆ ಉದ್ಭವಿಸುತ್ತದೆ.

35. ಸಿದ್ಧ ಅವಗಾಹನೆಗೆ ಸದರಿ ನಿಯಮಗಳನ್ನು ಈ ಮುಂದಿನಂತೆ ಉದ್ಧರಿಸಲಾಗಿದೆ:

**“ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ**

**ಅಧಿಸೂಚನೆ**

**ಸಂ: ಸಿಆಸುಇ 58 ಎಸ್‌ಆರ್‌ಆರ್ 2003, ಬೆಂಗಳೂರು,**
**ದಿನಾಂಕ 12ನೇ ನವೆಂಬರ್ 2003**

ಕರ್ನಾಟಕ ಸಿವಿಲ್ ಸೇವೆಗಳ (ಗ್ರಾಮೀಣ ಕೃಪಾಂಕದ ಪ್ರಯೋಜನವನ್ನು ಪಡೆದುಕೊಂಡು ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕಗೊಂಡ ವ್ಯಕ್ತಿಗಳ ವಿಲೀನತೆ) (ವಿಶೇಷ) ನಿಯಮಗಳು, 2003ನ್ನು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ 2ನೇ

ಉಪ–ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂ:ಡಿಪಿಎಆರ್ 58 ಎಸ್.ಆರ್.ಆರ್ 2003 ದಿನಾಂಕ 28ನೇ ಆಗಸ್ಟ್ 2003 ರಲ್ಲಿ ಕರ್ನಾಟಕ ವಿಶೇಷ ರಾಜ್ಯಪತ್ರ ಸಂ:1016 ದಿನಾಂಕ 28ನೇ ಆಗಸ್ಟ್ 2003ರ ಭಾಗ iv–ಎ ರಲ್ಲಿ, ಪ್ರಕಟಿಸಿ, ರಾಜ್ಯಪತ್ರದಲ್ಲಿ ಕರಡನ್ನು ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಈ ಮೂಲಕ ಬಾಧಿತರಾಗಬಹುದಾದ ಅಭ್ಯರ್ಥಿಗಳಿಂದ ಆಕ್ಷೇಪಣೆಗಳನ್ನು ಹಾಗೂ ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಸದರಿ ರಾಜ್ಯಪತ್ರವನ್ನು 28ನೇ ಆಗಸ್ಟ್ 2003 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಹಾಗೂ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ರಾಜ್ಯ ಸರ್ಕಾರವು ಸ್ವೀಕರಿಸಿ ಪರಿಗಣಿಸಲಾಗಿರುವುದರಿಂದ.

ಆದುದರಿಂದ ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 8ನೇ ಪ್ರಕರಣದೊಂದಿಗೆ ಓದಲಾದ 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರೂಪಿಸಿದೆ ಎಂದರೆ:

## <u>ನಿಯಮಗಳು</u>

1. **ಶೀರ್ಷಿಕೆ ಮತ್ತು ಪ್ರಾರಂಭ**: (1) ಈ ನಿಯಮಗಳನ್ನು, ಕರ್ನಾಟಕ ಸಿವಿಲ್ ಸೇವೆಗಳ (ಗ್ರಾಮೀಣ ಕೃಪಾಂಕದ ಪ್ರಯೋಜನ ಪಡೆದು ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕಗೊಂಡ ವ್ಯಕ್ತಿಗಳ ವಿಲೀನತೆ) (ವಿಶೇಷ) ನಿಯಮಗಳು, 2003 ಎಂದು ಕರೆಯತಕ್ಕದ್ದು.

(2) ಇವು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಗ್ರಾಮೀಣ ಕೃಪಾಂಕ ಪ್ರಯೋಜನ ಪಡೆದುಕೊಂಡು ರಾಜ್ಯ ಸಿವಿಲ್ ಸೇವೆಗಳಿಗೆ ನೇಮಕಗೊಂಡ ವ್ಯಕ್ತಿಗಳ ವಿಲೀನತೆ:**

ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಯಾವುದೇ ಸೇವೆ, ಪದವೃಂದ ಅಥವಾ ಹುದ್ದೆಯ ಸಂಬಂಧದಲ್ಲಿ ವಿಶೇಷವಾಗಿ ರೂಪಿಸಲಾದ ನೇಮಕಾತಿ ನಿಯಮಗಳು ಅಥವಾ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ಯಾವುದೇ ಇತರ ನಿಯಮಗಳಲ್ಲಿ ಏನೇ ಇದ್ದರೂ,

(i) (ಎ) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಆಗ ಅಸ್ತಿತ್ವದಲ್ಲಿರುವ 3–ಬಿ ನಿಯಮದ ಮೇರೆಗೆ ಗ್ರಾಮೀಣ ಕೃಪಾಂಕ ಪ್ರಯೋಜನ ಪಡೆದುಕೊಂಡು ಆಯ್ಕೆಗೊಂಡ ಹಾಗೂ 1998ರ ನವೆಂಬರ್ ಹನ್ನೊಂದನೇ ದಿನದ ನಂತರ ನೇಮಕಗೊಂಡ ವ್ಯಕ್ತಿಗಳು ; ಹಾಗೂ

(ಬಿ) 2003 ರ ಮೇ ಆರನೇ ದಿನದಂದು ಸೇವೆಯಲ್ಲಿದ್ದ;

ಹಾಗೂ

(ಸಿ) ರಿಟ್ ಅರ್ಜಿ ಸಂಖ್ಯೆಗಳು 519 ಹಾಗೂ 2002ರ 560 ಹಾಗೂ 2003ರ 111 ರಲ್ಲಿರುವ ರಿಟ್ ಅರ್ಜಿ ಸಂ:2002ರ 463 ರಲ್ಲಿನ ಸರ್ವೋಚ್ಚ ನ್ಯಾಯಾಲಯದ ದಿನಾಂಕ 2003ರ ಮೇ ಆರರ ತೀರ್ಪಿಗೆ ಅನುಸಾರವಾಗಿ ಸೇವೆಯಿಂದ ವಜಾಗೊಂಡ; ಅಥವಾ

(ii) ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಆಗ ಅಸ್ತಿತ್ವದಲ್ಲಿರುವ 3–ಬಿ ನಿಯಮದ ಮೇರೆಗೆ ಗ್ರಾಮೀಣ ಕೃಪಾಂಕದ ಪ್ರಯೋಜನವನ್ನು ಪಡೆದುಕೊಂಡು ಆಯ್ಕೆಯಾಗಿದ್ದ ಹಾಗೂ 11.11.1998ರ ನಂತರ ನೇಮಕಗೊಂಡಿದ್ದ ಹಾಗೂ ಶ್ರೀಧರ್ ಎಸ್. ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಸಿ.ಎ.ಸಂ.7105/2001ರಲ್ಲಿ ಐ.ಎ.ಸಂ:2–15 ರಲ್ಲಿ ದಿನಾಂಕ 26.11.2001ರ ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಆಯ್ಕೆಪಟ್ಟಿಗಳನ್ನು ಪರಿಷ್ಕರಿಸಿದ ಕಾರಣದಿಂದಾಗಿ ಸೇವೆಯಿಂದ ವಜಾಗೊಂಡ ವ್ಯಕ್ತಿಗಳನ್ನು,

ಮಾನವೀಯತೆ ಪರಿಗಣನೆಯಿಂದ ಒಂದು ಬಾರಿ ಕ್ರಮದಂತೆ ಈ ನಿಯಮಗಳಿಗೆ ಅನುಸಾರವಾಗಿ ರಾಜ್ಯದ ಸಿವಿಲ್ ಸೇವೆಗಳಲ್ಲಿ ವಿಲೀನಗೊಳಿಸತಕ್ಕದ್ದು.

ಪರಂತು, 2003ರ ಮೇ ಆರನೇ ದಿನದಂದು ಸೇವೆಯಲ್ಲಿದ್ದ ಆದರೆ 2003ರ ಮೇ ಆರನೇ ದಿನದ ಹಾಗೂ ಈ ನಿಯಮಗಳು ಪ್ರಾರಂಭವಾದ ದಿನಾಂಕದ ನಡುವಿನ ಅವಧಿಯಲ್ಲಿ ಮರಣ ಹೊಂದಿರುವ ವ್ಯಕ್ತಿಗಳು, ಈ ನಿಯಮಗಳ ಅಡಿಯಲ್ಲಿ ವಿಲೀನಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

3. **ನೇಮಕಾತಿ ಆದೇಶ**: ನೇಮಕಾತಿ ಪ್ರಾಧಿಕಾರವು, 2ನೇ ನಿಯಮದ ಮೇರೆಗೆ ಸೂಚಿಸಲಾದ ಎಲ್ಲಾ ಷರತ್ತುಗಳನ್ನು ಪೂರೈಸಿರುವಂಥ ವ್ಯಕ್ತಿಗಳಿಗೆ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು. ಅವರು ಸೇವೆಯಿಂದ ವಜಾಗೊಳ್ಳುವ ನಿಕಟಪೂರ್ವದಲ್ಲಿ ವಿಲೀನಗೊಂಡ ವ್ಯಕ್ತಿಗಳು ಹೊಂದಿದ್ದ ಹುದ್ದೆಗಳಿಗೆ ಪ್ರತಿಯಾಗಿ ನೇಮಕಾತಿಯನ್ನು ಮಾಡತಕ್ಕದ್ದು. ಯಾವ ಇಲಾಖೆಯಲ್ಲಿ ವ್ಯಕ್ತಿಗಳು ಸೇವೆಯಿಂದ

ವಜಾಗೊಂಡ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದರೋ ಅಲ್ಲಿ ಹುದ್ದೆಗಳು ಖಾಲಿ ಉಳಿದಿರುವ ಪಕ್ಷದಲ್ಲಿ, ಯುಕ್ತ ಅಧಿಕ ಸಂಖ್ಯೆಯ ಹುದ್ದೆಗಳನ್ನು, ಆಡಳಿತಾತ್ಮಕ ಇಲಾಖೆಯು ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆದು ಸೃಜಿಸತಕ್ಕದ್ದು.

4. **ವಿಲೀನಗೊಂಡ ವ್ಯಕ್ತಿಗಳ ರಜೆ, ಜ್ಯೇಷ್ಠತೆ, ವೇತನ ಹಾಗೂ ನಿವೃತ್ತಿ ವೇತನ**:

(1) ಅಂಥ ವಿಲೀನತೆಯ ದಿನಾಂಕಕ್ಕೆ ಮೊದಲು ಈ ನಿಯಮಗಳ ಮೇರೆಗೆ ವಿಲೀನಗೊಂಡ ವ್ಯಕ್ತಿಗಳು ಸಲ್ಲಿಸಿದ ಸೇವೆಯನ್ನು ಅವರ ರಜೆ ಹಾಗೂ ನಿವೃತ್ತಿ ವೇತನವನ್ನು ನಿರ್ಧರಿಸಲು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಆದರೆ ವೇತನ ಹಾಗೂ ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲ.

(2) ವಿಲೀನಗೊಂಡ ವ್ಯಕ್ತಿಗಳ ವೇತನವನ್ನು, ಯಾವ ಹುದ್ದೆಗೆ ಅವರನ್ನು ವಿಲೀನಗೊಳಿಸಲಾಗಿದೆಯೋ ಆ ಹುದ್ದೆಯ ಕನಿಷ್ಠ ಕಾಲಿಕ ವೇತನ ಶ್ರೇಣಿಗೆ ನಿಗದಿಪಡಿಸತಕ್ಕದ್ದು.

5. ಇತರ ನಿಯಮಗಳ ಅನ್ವಯ: ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966 ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ವಿನಿಮಯಿಸುವ ಎಲ್ಲಾ ಇತರ ನಿಯಮಗಳನ್ನು, ಅವರು ಈ ನಿಯಮಗಳ ಉಪಬಂಧಗಳಿಗೆ ಅಸಂಗತ

ವಾಗಿರದಿರುವಷ್ಟರ ಮಟ್ಟಿಗೆ ಈ ನಿಯಮಗಳ ಮೇರೆಗೆ ವಿಲೀನಗೊಳಿಸಲಾದ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು.

6. <u>ನಿರ್ದೇಶನಗಳನ್ನು ನೀಡುವ ಅಧಿಕಾರಿಗಳು:</u> ಈ ನಿಯಮಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದರೆ, ರಾಜ್ಯ ಸರ್ಕಾರವು, ತೊಂದರೆಗಳನ್ನು ನಿವಾರಿಸಲು ತನಗೆ ಅಗತ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ ಉಪಬಂಧಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ರೂಪಿಸಬಹುದು;

ಪರಂತು, ಈ ನಿಯಮಗಳು ಪ್ರಾರಂಭಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿ ಮುಕ್ತಾಯಗೊಂಡ ಅಂಥ ಆದೇಶವನ್ನು ರೂಪಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪಿ.ಕೆ.ಬಾಬುರಾವ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)”

36. ಶಾಸನವು, ನ್ಯಾಯಿಕ ನಿರ್ಣಯವನ್ನು ನೇರವಾಗಿ ತಳ್ಳಿಹಾಕಿಲ್ಲವೆಂಬುದು ನಿಶ್ಚಿತವಾಗುತ್ತದೆ. ಆದರೆ, ನಿರ್ಣಯವು ಪರಿಣಾಮಕಾರಿಯಾಗದಂತೆ ಮಾಡಲು ಸಕ್ಷಮ ಶಾಸಕಾಂಗವು, ಪೂರ್ವಾನ್ವಯವಾಗಿ ತೀರ್ಪಿನ ಬುನಾದಿ ಅಥವಾ ಅಡಿಪಾಯವನ್ನು ತೆಗೆದುಹಾಕುವಾಗ, ಸದರಿ ಪ್ರಯತ್ನವು ಸಿಂಧುವಾದ ಕಾನೂನಾತ್ಮಕ

ಪ್ರಯತ್ನವಾಗಿದೆ ಆದರೆ ಸಂವಿಧಾನದ ಯಾವುದೇ ಇತರ ಪರಿಮಿತಿಯನ್ನು ಇದು ಮೀರುವುದಿಲ್ಲ. ಹಿಂದಿನ ಶಾಸನದಲ್ಲಿರುವ ನ್ಯೂನತೆಯನ್ನು ನಿವಾರಿಸುವಂಥ ಶಾಸನಾತ್ಮಕ ಸಾಧನವನ್ನು ನ್ಯಾಯಿಕ ಅಧಿಕಾರವನ್ನು ಅತಿಕ್ರಮಿಸಿದೆಯೆಂದು ಪರಿಗಣಿಸಲಾಗುವುದಿಲ್ಲ. ತನ್ನ ವ್ಯಾಪ್ತಿಯೊಳಗೆ ಶಾಸನ ರಚಿಸಲು ಇರುವ ಸಾರ್ವಭೌಮ ಅಧಿಕಾರವನ್ನು ಪೂರ್ವಾನ್ವಯವಾಗಿ ಹಾಗೂ ಉತ್ತರಾನ್ವಯವಾಗಿ ಎರಡೂ ರೀತಿಯಲ್ಲಿ ಪ್ರಶ್ನಿಸಲು ಸಾಧ್ಯವಾಗುವುದಿಲ್ಲ. ತನ್ನ ಮೊದಲಿನ ಶಾಸನದಲ್ಲಿರುವ ನ್ಯೂನತೆಯನ್ನು ನಿವಾರಿಸಲು ಶಾಸಕಾಂಗಕ್ಕೆ ಅನುಮತಿಸಬಹುದಾದುದಾಗಿದೆ. ಈ ನ್ಯೂನತೆಯನ್ನು ಶಾಸನಾತ್ಮಕ ಕ್ರಮದ ಮೂಲಕ ಪೂರ್ವಾನ್ವಯವಾಗಿ ಹಾಗೂ ಉತ್ತರಾನ್ವಯವಾಗಿ ಎರಡೂ ರೀತಿಯಲ್ಲಿ ನಿವಾರಿಸಬಹುದಾಗಿದೆ ಹಾಗೂ ಹಿಂದಿನ ಕ್ರಮಗಳನ್ನು ಸಿಂಧುಗೊಳಿಸಬಹುದಾಗಿದೆ. ಆದರೆ ನ್ಯೂನತೆಯಿಲ್ಲದೆ ಕಾನೂನಾತ್ಮಕವಾಗಿ ನಿವಾರಿಸುವುದಷ್ಟೆ ಸಿಂಧುವಾಗಿದ್ದಲ್ಲಿ, ಕಾನೂನಾತ್ಮಕ ಕ್ರಮವು, ಕಾನೂನಾತ್ಮಕ ಕಟ್ಟಳೆ ಮೂಲಕ ತೀರ್ಪನ್ನು ಉಲ್ಲಂಘಿಸಿದಂತಾಗುತ್ತದೆ ಹಾಗೂ ಅಸಿಂಧುವಾಗುತ್ತದೆ.

37. ***ಮೀರತ್ ಅಭಿವೃದ್ಧಿ ಪ್ರಾಧಿಕಾರ –ವಿರುದ್ಧ– ಸತ್ಬೀರ್ ಸಿಂಗ್*** [4], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "10. ಈ ನ್ಯಾಯಾಲಯವು, ನ್ಯಾಯಿಕ ಪರಿಶೀಲನೆಯ ಅಧಿಕಾರವನ್ನು ಚಲಾಯಿಸಿ, ಶಾಸಕಾಂಗಕ್ಕೆ ತೀರ್ಪನ್ನು ತಳ್ಳಿಹಾಕುವ ಅಧಿಕಾರವಿಲ್ಲವೆಂದು ಘೋಷಿಸಿದಾಗ, ನ್ಯಾಯಾಲಯವು ಎತ್ತಿ ಹಿಡಿದ ಕೊರತೆಗಳನ್ನು ಯುಕ್ತ ಪದಪ್ರಯೋಗ ಬಳಸುವ ಮೂಲಕ ನ್ಯಾಯಾಲಯವು ಘೋಷಿಸಿದ ಕಾನೂನಿಗೆ ಅಸಂಗತವಾದ ಕಾನೂನನ್ನು ತಿದ್ದುಪಡಿ ಮಾಡುವ ಮೂಲಕ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪರಿನಿಯಮದಲ್ಲಿರುವ ಕೊರತೆಗಳನ್ನು ಎತ್ತಿ ತೋರಿಸುವ ಹಾಗೆ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಅಧಿಕಾರವನ್ನು ಇದು ಹೊಂದಿದೆ. ಈ ನ್ಯಾಯಾಲಯವು, ಭಾರತೀಯ

4. (1996) 11 ಎಸ್‌ಸಿಸಿ 462

ಅಲ್ಯುಮಿನಿಯಂ ಕಂ. -ವಿರುದ್ಧ- ಕೇರಳ ರಾಜ್ಯದ ಪ್ರಕರಣದ ಇತ್ತೀಚಿನ ತೀರ್ಪಿನಲ್ಲಿ ತೀರ್ಪುಜನ್ಯ ಕಾನೂನನ್ನು ಎತ್ತಿ ಹಿಡಿದಿರುವುದನ್ನು ಪರಿಗಣಿಸಿದೆ ಹಾಗೂ ಪರಿನಿಯಮವನ್ನು ತಿದ್ದುಪಡಿ ಮಾಡುವ ಅಧಿಕಾರವನ್ನು ಚಲಾಯಿಸುವಂಥ ಅಧಿಕಾರವು, ನ್ಯಾಯಾಲಯದ ನ್ಯಾಯಿಕ ಅಧಿಕಾರವನ್ನು ಅನಿರೀಕ್ಷಿತವಾಗಿ ಆಕ್ರಮಿಸುತ್ತದೆ ಆದರೆ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಅಸಿಂಧುವೆಂದು ಘೋಷಿಸಲ್ಪಟ್ಟಿರುವ ಕ್ರಮಗಳನ್ನು ಸಿಂಧುಗೊಳಿಸುವ ಸಂವಿಧಾನಾಧಿಕಾರದ ಶಾಸನಬದ್ಧ ಚಲಾವಣೆಯಾಗಿರುತ್ತದೆ.”

38. ***ತಮಿಳುನಾಡು ರಾಜ್ಯ -ವಿರುದ್ಧ- ಅರೂರನ್ ಶುಗರ್ಸ್ ಲಿಮಿಟೆಡ್***[5], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನ ಅಂಶಗಳನ್ನು ಕುರಿತ ಕೆಲವು ಪ್ರಕರಣಗಳನ್ನು ವಿಶ್ಲೇಷಣೆ ಮಾಡಿದ ತರುವಾಯ ಈ ಹಿಂದಿನ ತತ್ವಗಳನ್ನು ಪುನರುಚ್ಚರಿಸಿದೆ:

“16..........ನ್ಯಾಯಾಲಯವು ಎತ್ತಿ ಹಿಡಿದ ಕೊರತೆಯನ್ನು ನಿವಾರಿಸಲು ಅಥವಾ ಅಧಿನಿಯಮದ ಪರಿಭಾಷೆ ಅಥವಾ ಯಾವುದೇ ಇತರ ಪ್ರಶ್ನಿತ ಉಪಬಂಧವನ್ನು ಪೂರ್ವಭಾವಿಯಾಗಿ ತಿದ್ದುಪಡಿ ಮಾಡಲು ಶಾಸಕಾಂಗವು ಮುಕ್ತವಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ, ನ್ಯಾಯಾಂಗದ ಅಧಿಕಾರವನ್ನು ಶಾಸಕಾಂಗವು ಅತಿಕ್ರಮಣ ಮಾಡಲಾಗಿದೆಯೆಂದು ಹೇಳಲು ಸಾಧ್ಯವಾಗುವುದಿಲ್ಲ. ನ್ಯಾಯಾಲಯಗಳ ನಿರ್ದೇಶನಗಳಿಗೆ ಯಾವಾಗಲೂ ಬದ್ಧವಾಗಿರಲೇ ಬೇಕು, ಯಾವ ಷರತ್ತುಗಳನ್ನು ಅದು ಆಧರಿಸಿದೆಯೋ ಆ ಷರತ್ತುಗಳನ್ನು ಹಾಗೆ ಮೂಲಭೂತವಾಗಿ ಮಾರ್ಪಾಡು ಮಾಡಿದ ಹೊರತು, ಅಂಥ ನಿರ್ಣಯಗಳ ಮಾರ್ಪಾಟು ಸನ್ನಿವೇಶಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. ಇದು, ಪ್ರಶ್ನಿತ ತೀರ್ಪಿನಲ್ಲಿ ಎತ್ತಿ ಹಿಡಿಯಲಾದ ಪರಿನಿಯಮದಲ್ಲಿನ ಕೊರತೆಯನ್ನು

5. (1997) 1 ಎಸ್‌ಸಿಸಿ 326

ತೆಗೆದುಹಾಕುವುದನ್ನು ಹಾಗೆಯೇ ಯಾವ ಅಧಿನಿಯಮಿತಿಯ ಉಪಬಂಧಗಳನ್ನು ಅಂಥ ತೀರ್ಪು ಆಧರಿಸಿದೆಯೋ ಅವುಗಳ ಪೂರ್ವಾನ್ವಯ ಪರಿಣಾಮದೊಂದಿಗೆ ಮಾರ್ಪಾಡು ಅಥವಾ ಪ್ರತ್ಯಾಯೋಜನೆಯನ್ನು ಮಾಡುವುದನ್ನು ಒಳಗೊಂಡಿರುತ್ತದೆ."

39. ಹಾಗೆಯೇ ಶಾಸಕಾಂಗವು, ಸಿಂಧುವಾದ ಕಾನೂನನ್ನು ಮಾಡುವಲ್ಲಿ, ಸದರಿ ಕಾನೂನಿನ ಸಾರಭೂತ ಉಪಬಂಧಗಳನ್ನು ಭವಿಷ್ಯವರ್ತಿ ಕಾರ್ಯಾಚರಣೆಗೆ ಮಾತ್ರವೇ ಉಪಬಂಧಿಸಬಹುದಾಗಿರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿದೆ. ಅದೇ ರೀತಿ ಅಸಿಂಧುವಾಗಿರುವುದೆಂದು ಕಂಡುಬಂದಿರುವ ಕಾನೂನುಗಳನ್ನು ಸಿಂಧುಗೊಳಿಸುವ ಪೂರಕ ಅಥವಾ ಸಹಾಯಕ ಅಧಿಕಾರಗಳನ್ನು ಪ್ರಶ್ನಿತ ಶಾಸಕಾಂಗ ಅಧಿಕಾರವು ಒಳಗೊಂಡಿರುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿರುವುದಿಲ್ಲ. ಶಾಸಕಾಂಗವು ಹೊರಡಿಸಿದ ಕಾನೂನನ್ನು ಒಂದು ಅಥವಾ ಬೇರೊಂದು ಕೊರತೆಯ ಕಾರಣಕ್ಕಾಗಿ ಅಸಿಂಧುವಾಗಿದೆಯೆಂದು ನ್ಯಾಯಾಲಯಗಳು ರದ್ದುಗೊಳಿಸಿದರೆ, ಸದರಿ ಕೊರತೆಯನ್ನು ನಿವಾರಿಸಲು ಯುಕ್ತ ಶಾಸನ ರೂಪಿಸಲು ಹಾಗೂ ಅಸಿಂಧುವಾದ ಕಾನೂನನ್ನು ಹೊರಡಿಸಿದ್ದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಸದರಿ ಮೊದಲಿನ ಕಾನೂನಿನ ಉಪಬಂಧಗಳನ್ನು ರೂಪಿಸುವ ಸಲುವಾಗಿ ಸಿಂಧುವಾದ ಕಾನೂನನ್ನು ಹೊರಡಿಸಲು ಅದು ಸಕ್ಷಮವಾಗಿರುತ್ತದೆ.

40. ***ಬಿಹಾರ ರಾಜ್ಯ –ವಿರುದ್ಧ– ಬಿಹಾರ ನಿವೃತ್ತಿವೇತನದಾರರ ಸಮಾಜ***[6], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಅಸಿಂಧುವಾದ ಕೆಲವು ಕ್ರಮವನ್ನು ತೆಗೆದುಹಾಕಲು ಯಾವ ಪೂರ್ವೋಕ್ತ ಅವಧಿಯಲ್ಲಿ ಹಿಂದಿನ ತೀರ್ಪನ್ನು ಘೋಷಿಸಲಾಗಿದೆಯೋ ಅಲ್ಲಿಯವರೆಗೆ ಪೂರ್ವಾನ್ವಯವಾಗಿ ಮಾರ್ಪಾಟು ಮಾಡಲು ಶಾಸಕಾಂಗವು ಯಾವಾಗಲೂ ಮುಕ್ತವಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದೆ. ಸಂದರ್ಭವು, ಕೆಲವು ಸನ್ನಿವೇಶಗಳಲ್ಲಿ ಮೂಲಭೂತ ಬದಲಾವಣೆಯಲ್ಲಿ

6. (2006) 5 ಎಸ್‌ಸಿಸಿ 65

ಒಂದಾಗಿರುತ್ತದೆ ಹಾಗೂ ನ್ಯಾಯಿಕ ಅಧಿಕಾರಗಳನ್ನು ಕಿತ್ತುಕೊಳ್ಳಲು ಕಾರಣವಾಗುವ ಆಧಾರದ ಮೇಲೆ ಅಂಥ ಸಿಂಧುವಾಗಿರುವ ಅಧಿನಿಯಮವನ್ನು, ಪ್ರಶ್ನಿಸಲು ಮುಕ್ತವಾಗಿರಲಿಲ್ಲ.

41. ***ವಿಜಯ್ ಮಿಲ್ಸ್ ಕಂಪನಿ ಲಿಮಿಟೆಡ್ ಹಾಗೂ ಇತರರು -ವಿರುದ್ಧ-ಗುಜರಾತ್ ರಾಜ್ಯ ಹಾಗೂ ಇತರರು***[7],ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಈ ಬಗ್ಗೆ ಶಾಸಕಾಂಗದ ಉದ್ದೇಶವನ್ನು ಆಧರಿಸಿ ಪೂರ್ವಾನ್ವಯವಾಗಿ ಅಧಿನಿಯಮದ ಉಪಬಂಧಗಳನ್ನು ಸಿಂಧುಗೊಳಿಸುವ ವಿಭಿನ್ನ ವಿಧಾನಗಳಿವೆಯೆಂದು ಅಭಿಪ್ರಾಯಪಟ್ಟಿದೆ. ಶಾಸಕಾಂಗವು, ಅಧಿನಿಯಮದ ಉಪಬಂಧಗಳು, ಹಿಂದಿನ ಅವಧಿಯಲ್ಲಿ ನಿರ್ದಿಷ್ಟ ದಿನಾಂಕದಿಂದ ಅಸ್ತಿತ್ವದಲ್ಲಿವೆಯೆಂದು ಅವುಗಳನ್ನು ಭಾವಿಸಬೇಕೆಂದು ಉದ್ದೇಶಿಸಿದಲ್ಲಿ ಹಾಗೆಯೇ ಸಂಬಂಧಪಟ್ಟ ಉಪಬಂಧಗಳು ಹಿಂದಿನ ದಿನಾಂಕಗಳಿಂದ ಅಸ್ತಿತ್ವದಲ್ಲಿದ್ದರೆ ಹೇಗೋ ಹಾಗೆ ಹಿಂದಿನ ಅವಧಿಯಲ್ಲಿ ಕೈಗೊಂಡ ಕ್ರಮಗಳನ್ನು ಸಿಂಧುಗೊಳಿಸಲು, ಶಾಸಕಾಂಗವು, ಸಿಂಧುವಾಗಿರುವ ಅಧಿನಿಯಮದ ನಿರ್ದಿಷ್ಟ ಭಾಷೆಯ ಮೂಲಕ ಸದರಿ ಉದ್ದೇಶವನ್ನು ಸ್ಪಷ್ಟಪಡಿಸಿದೆ. ಪೂರ್ವಾನ್ವಯವಾಗಿ ಉಪಬಂಧಗಳ ಆಧಾರದ ಮೇಲೆ ಬದಲಾಯಿಸಲು ಹಾಗೂ ಬದಲಾದ ಆಧಾರದ ಮೇಲೆ ಕ್ರಮಗಳನ್ನು ಸಿಂಧುಗೊಳಿಸಲು ಶಾಸಕಾಂಗವು ಮುಕ್ತವಾಗಿರುತ್ತದೆ.

42. ಈ ಹಿನ್ನೆಲೆಯಲ್ಲಿ, ವಿಶೇಷ ನಿಯಮಗಳು ಸ್ವರೂಪದಲ್ಲಿ ಪರಿಹಾರಕವಾಗಿವೆಯೇ ಎಂಬುದನ್ನು ಪರಿಶೀಲಿಸೋಣವೇ?

43. ಮೇಲೆ ತಿಳಿಸಲಾದಂತೆ, ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು, ರಾಜ್ಯ ಸಿವಿಲ್ ಸೇವೆಗಳ ಮೇರೆಗೆ ಸಾರ್ವಜನಿಕ ಉದ್ಯೋಗವನ್ನು ನೀಡುವಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಶೇ 10ರಷ್ಟು ಅಂಕಗಳನ್ನು ನೀಡಿರುವ 3-ಬಿ ನಿಯಮವು ಅಸಂವಿಧಾನಿಕವೆಂದು ಅಭಿಪ್ರಾಯಪಟ್ಟಿದೆ. ಮಾನ್ಯ ಏಕಪೀಠ ಸದಸ್ಯ ನ್ಯಾಯಾಧೀಶರು,

7. (1993) 1 ಎಸ್‌ಸಿಸಿ 345

'ಗ್ರಾಮೀಣ ಅಭ್ಯರ್ಥಿಗಳ ಪರಿಭಾಷೆ ಅಡಿಯಲ್ಲಿ ಬರುವ ಸಂಪೂರ್ಣ ಜನಸಂಖ್ಯೆ 16(4)ನೇ ಅನುಚ್ಛೇದದ ಉದ್ದೇಶಗಳಿಗಾಗಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರನ್ನು ಸೃಜಿಸಲಾಗಿದೆಯೆಂಬುದನ್ನು ತೋರಿಸಲು ಅಥವಾ ರಾಜ್ಯದ ಅಭಿಪ್ರಾಯದಲ್ಲಿ ರಾಜ್ಯದ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದಿರುವ ಹಿಂದುಳಿದ ನಾಗರಿಕ ವರ್ಗವನ್ನು ಒಟ್ಟಾಗಿ ಸೃಜಿಸಿ ಅವರು ಸರ್ಕಾರಿ ನೌಕರಿಗಳಲ್ಲಿ ಯಾವುದೇ ಕೃಪಾಂಕ ವಿನಾಯಿತಿಗಳು, ರಿಯಾಯಿತಿಗಳು ಅಥವಾ ವಿಶೇಷ ಹಕ್ಕುಗಳನ್ನು ಪಡೆದುಕೊಳ್ಳುವ ಹಕ್ಕುಳ್ಳವರಾಗುವರೆಂಬುದನ್ನು ತೋರಿಸಲು ಯಾವುದೇ ಮಾಹಿತಿಯುನ್ನು ಒದಗಿಸಿಲ್ಲವೆಂಬುದು ಕಂಡುಬರುತ್ತದೆ. ನ್ಯಾಯಾಲಯವು, ಮುಂದುವರೆದು ಗ್ರಾಮೀಣ ಅಭ್ಯರ್ಥಿಗಳ ಹಿಂದುಳಿದಿರುವಿಕೆಯನ್ನು ಅಥವಾ ಗ್ರಾಮೀಣ ಪ್ರದೇಶಗಳಿಂದ ಬಂದಿರುವ ವ್ಯಕ್ತಿಗಳು ರಾಜ್ಯದ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಹೊಂದಿಲ್ಲವೆಂಬುದನ್ನು ಸಮರ್ಥಿಸುವಲ್ಲಿಯಾಗಲಿ ದಾಖಲಿಸಲು ದಿನಾಂಕಗಳು ಲಭ್ಯವಿರಲಿಲ್ಲವೆಂಬುದನ್ನು ಗಮನಿಸಿದೆ. ಹಾಗೆ ಅಭಿಪ್ರಾಯಪಡುವಾಗ, ಈ ನ್ಯಾಯಾಲಯವು, ***ಉತ್ತರ ಪ್ರದೇಶ ರಾಜ್ಯ –ವಿರುದ್ಧ –ಪ್ರದೀಪ್ ಟಂಡನ್*** [8]**,** ***ಸುನೀಲ್ ಜೇಟ್ಲಿ –ವಿರುದ್ಧ– ಹರಿಯಾಣ ರಾಜ್ಯ*** [9] ಹಾಗೂ ***ಮಹಾರಾಷ್ಟ್ರ ರಾಜ್ಯ –ವಿರುದ್ಧ– ರಾಜ್‌ಕುಮಾರ್*** [10] ಪ್ರಕರಣಗಳ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅನುಸರಿಸಿದೆ.

44. ***ಪ್ರದೀಪ್ ಟಂಡನ್*** ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯವು, ಗ್ರಾಮೀಣ ಪ್ರದೇಶದಲ್ಲಿರುವ ಉತ್ತರ ಪ್ರದೇಶ ರಾಜ್ಯದಲ್ಲಿರುವ ಶೇ.80ರಷ್ಟು ಜನಸಂಖ್ಯೆ ತಾನಾಗಿ ಒಂದೇ ತೆರನಾಗಿರುತ್ತಾರೆಂದು ಹೇಳಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. ಅವರು ಅದೇ ರೀತಿ ಇದ್ದಾರೆ. ಅವರ ಉದ್ಯೋಗವು ವಿಭಿನ್ನವಾಗಿದೆ. ಅವರ ಜೀವನಮಟ್ಟವೂ ವಿಭಿನ್ನವಾಗಿದೆ. ಅವರ ಜೀವನ ಕ್ರಮವು ಬೇರೆಯೇ ಆಗಿದೆ. ಜನಸಂಖ್ಯೆಯು ತನ್ನದೇ ಆದ ವರ್ಗವನ್ನು ಹೊಂದಿರಲು ಸಾಧ್ಯವಿಲ್ಲ. ಗ್ರಾಮೀಣ ಪರಿಸರವು ಒಂದು ವರ್ಗವಾಗಿ ರೂಪಿಸಿಲ್ಲ. ಗ್ರಾಮೀಣ

8. ಎಐಆರ್ 1975 ಎಸ್‌ಸಿ 563
9. (1984) 4 ಎಸ್‌ಸಿಸಿ 296
10. ಎಐಆರ್ 1982 ಎಸ್‌ಸಿ 1301

ಪ್ರದೇಶಗಳು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದು ರಾಜ್ಯದ ಬಹುತೇಕರಿಗೆ ಮೀಸಲಾತಿಯನ್ನು ನೀಡಲು ಸಲಹೆ ನೀಡುವುದು.

45. ಈ ನಿರ್ಣಯವನ್ನಾಧರಿಸಿ, ಈ ನ್ಯಾಯಾಲಯವು, ಗ್ರಾಮೀಣ ಶಾಲೆಗಳಲ್ಲಿ ಓದಿರುವ ವಿದ್ಯಾರ್ಥಿಗಳು ಶಾಲಾ ಮಟ್ಟದ ಶಿಕ್ಷಣ ಪಡೆಯುವ ವಿಷಯದಲ್ಲಿ ಯಾವುದೇ ಅನಾನುಕೂಲವನ್ನು ಯಾವುದೇ ರೀತಿಯಲ್ಲಿ ಅನುಭವಿಸಿರುವರೆಂಬುದನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆಯೆಂದು ಅಭಿಪ್ರಾಯಪಟ್ಟಿದೆ. ಆದರೆ, ಅದಲ್ಲದೆಯೂ ಕೂಡ ವಸ್ತುತ: ವರ್ಗೀಕರಣ ಮಾಡುವುದು ಸಾಂವಿಧಾನಿಕವಾಗಿ ನಿಷಿದ್ಧವಾದುದಾಗಿದೆ.

46. ವಿಶೇಷ ನಿಯಮಗಳ ಅವಗಾಹನೆಯು, 3–ಬಿ ನಿಯಮದಲ್ಲಿರುವ ಕೊರತೆಯನ್ನು ಪರಿಹರಿಸಲು ಇದನ್ನು ಮಾಡಲಾಗಿಲ್ಲವೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ವಿಶೇಷ ನಿಯಮಗಳು ಸಿಂಧುತ್ವ ಖಂಡವನ್ನೇನೂ ಒಳಗೊಂಡಿಲ್ಲ. ವಿಶೇಷ ನಿಯಮಗಳ 2ನೇ ನಿಯಮಗಳಲ್ಲಿ ನೋಡಬಹುದಾದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ದಿನಾಂಕ 6.5.2003ರ ತೀರ್ಪಿಗೆ ಅನುಸಾರವಾಗಿ ಸೇವೆಯಿಂದ ವಜಾಗೊಳಿಸಲಾಗಿರುವವರನ್ನು ಮಾನವೀಯತೆಯ ಆಧಾರದ ಮೇಲೆ ಒಂದು ಬಾರಿಯ ಕ್ರಮವಾಗಿ ರಾಜ್ಯ ಸಿವಿಲ್ ಸೇವೆಗಳಲ್ಲಿ ವಿಲೀನಗೊಳಿಸಲು ಉದ್ದೇಶಿಸಲಾಗಿತ್ತು. 4(1)ನೇ ನಿಯಮವು ವಿಶೇಷವಾಗಿ, ಸದರಿ ನಿಯಮಗಳ ಮೇರೆಗೆ ವಿಲೀನಗೊಳಿಸಲಾದ ವ್ಯಕ್ತಿಗಳು ಅಂಥ ವಿಲೀನತೆಯ ದಿನಾಂಕಕ್ಕೆ ಮೊದಲು ಸಲ್ಲಿಸಲಾದ ಸೇವೆಯನ್ನು ಅವರ ರಜೆ ಹಾಗೂ ನಿವೃತ್ತಿವೇತನವನ್ನು ನಿರ್ಧರಿಸುವಲ್ಲಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದೆಂದು ಆದರೆ, ವೇತನ ಹಾಗೂ ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸತಕ್ಕದ್ದಲ್ಲವೆಂಬುದನ್ನು ನಿರೂಪಿಸುತ್ತದೆ.

47. 3ನೇ ನಿಯಮವು, ನೇಮಕಾತಿ ಪ್ರಾಧಿಕಾರವು, 2ನೇ ನಿಯಮದಲ್ಲಿ ಸೂಚಿಸಲಾಗಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರುವಂಥ ವ್ಯಕ್ತಿಗಳಿಗೆ ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದೆಂದು ತಿಳಿಸಿದೆ. ನೇಮಕಾತಿಯನ್ನು, ಅವರು ಸೇವೆಯಿಂದ

ವಜಾಗೊಂಡ ಕೂಡಲೇ ವಿಲೀನಗೊಳಿಸಲಾದ ವ್ಯಕ್ತಿಗಳು ಧಾರಣೆ ಮಾಡಿದ್ದ ಹುದ್ದೆಯ ಪ್ರತಿಯಾಗಿ ಮಾಡತಕ್ಕದ್ದು. ಅಭ್ಯರ್ಥಿಗಳು ಅವರ ಸೇವೆಯಿಂದ ವಜಾಗೊಂಡ ಕೂಡಲೇ ಅವರು ಧಾರಣೆ ಮಾಡಿದ್ದ ಹುದ್ದೆಯಲ್ಲಿ ಅವರನ್ನು ವಿಲೀನಗೊಳಿಸಲಾಗಿತ್ತು. ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಅನುಸಾರವಾಗಿ ಅವರು ವಜಾಗೊಂಡ ನಂತರ ನ್ಯಾಯಾಲಯದ ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಸೇವೆಯಲ್ಲಿ ಮುಂದುವರಿದಿದ್ದರೂ ಸಹ ಯಾವುದೇ ರೀತಿಯಲ್ಲಿ ಅವರಿಗೆ ಸಹಾಯಕವಾಗುವುದಿಲ್ಲ.

48. ಅಭ್ಯರ್ಥಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ವಿಶೇಷ ನಿಯಮಗಳಿಗೆ ಅನುಸಾರವಾಗಿ ಅಭ್ಯರ್ಥಿಗಳನ್ನು ವಿಲೀನಗೊಳಿಸಲಾಗಿರುವುದರಿಂದ ಅವರು ವಜಾಗೊಳ್ಳುವ ಮೊದಲು ಹಾಗೂ ವಿಶೇಷ ನಿಯಮಗಳ ಮೇರೆಗೆ ಅವರನ್ನು ವಿಲೀನಗೊಳಿಸಿದ ನಂತರ ಅವರು ಸಲ್ಲಿಸಿದ ಸೇವೆಯ ನಡುವೆ ಹೊಂದಾಣಿಕೆ ಇರುತ್ತದೆ. ಅಂಥ ಹೊಂದಾಣಿಕೆಯೊಂದಿಗೆ ಎರಡು ಸೇವೆಗಳ ಒಟ್ಟುಗೂಡುವಿಕೆ ಹಾಗೂ ಬೆಸುಗೆ ಇರುತ್ತದೆ.

49. ಈ ನ್ಯಾಯಾಲಯದ ವಿಭಾಗೀಯ ಪೀಠವು, ***ಆರ್.ಮಂಜುನಾಥ್ –ವಿರುದ್ಧ– ಕರ್ನಾಟಕ ರಾಜ್ಯ*** [11] ಪ್ರಕರಣದಲ್ಲಿ 'ವಿಲೀನತೆ' ಪದಾವಳಿಯನ್ನು ಪರಿಗಣಿಸಿದೆ. ಇದು ಈ ರೀತಿ ಅಭಿಪ್ರಾಯಪಟ್ಟಿದೆ:

> "80. ವ್ಯವಹಾರದ ರೀತಿಯಲ್ಲಿ ಹುದ್ದೆಗೆ ಸಂಬಂಧಪಟ್ಟಂತೆ ಸೇವಾ ನಾಯಕತ್ವದಲ್ಲಿ 'ವಿಲೀನ' ಎಂಬ ಶಬ್ದವು, ಆ ಹುದ್ದೆಗೆ ನೇಮಕಾತಿ ಕಾರಣದಿಂದಾಗಲಿ ಅಥವಾ ಬಡ್ತಿ ಕಾರಣದಿಂದಾಗಲಿ ತನ್ನ ಸ್ವಂತ ಹಕ್ಕಿನಲ್ಲಿ ನಿರ್ದಿಷ್ಟ ಹುದ್ದೆಯನ್ನು ಧಾರಣ ಮಾಡದಿರುವ ಒಬ್ಬ ನೌಕರ ಎಂಬುದನ್ನು ಸೂಚಿಸುತ್ತದೆ ಆದರೆ ಪ್ರತಿನಿಯೋಜನೆ ಮೂಲಕವಾಗಲಿ ಅಥವಾ ವರ್ಗಾವಣೆ ಮೂಲಕವಾಗಲಿ ಬೇರೆ ಬೇರೆ ಇಲಾಖೆಯಲ್ಲಿರುವ ಬೇರೆ ಬೇರೆ ಹುದ್ದೆಯನ್ನು ಹೊಂದುವುದಾಗಿದೆ

11. 2012(5) ಕೆಸಿಸಿಆರ್ 3657

ಹಾಗೂ ಅವನು ತನ್ನ ಸ್ವಂತ ಹಕ್ಕಿನ ಮೇಲೆ ಆ ಹುದ್ದೆಯನ್ನು ಅವನು ಧಾರಣ ಮಾಡಿದ ನಂತರ ಆ ಹುದ್ದೆಯಲ್ಲಿ ವಿಲೀನಗೊಳಿಸಿದ ನಂತರ, ಅವನ ಮೂಲ ಇಲಾಖೆಯಲ್ಲಿ ಧಾರಣಾಧಿಕಾರವನ್ನು ಕಳೆದುಕೊಳ್ಳುವನು. 'ವಿಲೀನಗೊಳ್ಳಬೇಕಿದ್ದ ಅಧಿಕ ಸಿಬ್ಬಂದಿಯನ್ನು ಒಂದು ಹುದ್ದೆಯಿಂದ ಮತ್ತೊಂದು ಹುದ್ದೆಗೆ ವರ್ಗಾಯಿಸಲಾಗಿದೆಯೆಂದು ಭಾವಿಸಬೇಕು ಹಾಗೆ ಅವರ ಸೇವೆಯಲ್ಲಿ ಯಾವುದೇ ಪ್ರತ್ಯೇಕತೆ ಇರುವುದಿಲ್ಲ. ಹಲವು ಸಂದರ್ಭಗಳಲ್ಲಿ ಸ್ಥಳೀಯ ಅಥವಾ ಇತರ ಪ್ರಾಧಿಕಾರಿಗಳು ಅಥವಾ ಸಿಬ್ಬಂದಿ ಸದಸ್ಯರಿಂದ ಕೂಡಿರುವ ಖಾಸಗಿ ಸಂಘ ಸಂಸ್ಥೆಗಳಿಗೆ ಸೇರಿದ ಸಿಬ್ಬಂದಿ ಅಥವಾ ಸಂಸ್ಥೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು, ಅಂಥ ಸರ್ಕಾರೇತರ ಸಂಸ್ಥೆಗಳ ನೌಕರರನ್ನು ಸರ್ಕಾರಿ ಸೇವೆಗಳಲ್ಲಿ ವಿಲೀನಗೊಳಿಸಲಾಗಿದೆ. ಶಾಶ್ವತ ವಿಲೀನತೆಗಾಗಿ, ವಿಲೀನಗೊಳಿಸುವ ಸಂಸ್ಥೆಯ ಸಾಂಪ್ರದಾಯಿಕ ಆದೇಶ ಅಗತ್ಯವಾಗಿರುತ್ತದೆ. ಅದೇ ರೀತಿ, ರೋಗಗ್ರಸ್ತ ಸರ್ಕಾರಿ ಕಂಪನಿಯು, ಬಿಐಎಫ್ಆರ್ (BIFR) ಇತ್ಯರ್ಥಪಡಿಸಿದ ಯೋಜನೆಗೆ ಅನುಸಾರವಾಗಿ ಸರ್ಕಾರಿ ಸೇವೆಯಲ್ಲಿ ನಿಯೋಜಿಸಿದ್ದಲ್ಲಿ, ಅಂಥ ನೌಕರರ ವಿಲೀನಗೊಳಿಸುವಿಕೆಗೆ ಕಾರಣವಾಗುತ್ತದೆ ಹಾಗೂ ಯೋಜನೆಯು, ಪರಿನಿಯಮದಂತೆ ಇರುತ್ತದೆ ಹಾಗೂ ಅದನ್ನು ರಾಜ್ಯ ಶಾಸಕಾಂಗವು ರದ್ದುಗೊಳಿಸಲು ಸಾಧ್ಯವಾಗುವುದಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಯನ್ನು, ರಾಜ್ಯ ಸರ್ಕಾರವು, ಅಂಥ ಸಂಸ್ಥೆಯಲ್ಲಿರುವ ಸಿಬ್ಬಂದಿ ಸದಸ್ಯರು ಸಲ್ಲಿಸಿದ ಆ ಸೇವಾ ಷರತ್ತಿಗೊಳಪಟ್ಟು ವಹಿಸಿಕೊಂಡಿದ್ದಲ್ಲಿ ಅದನ್ನು ಸರ್ಕಾರಿ ಸೇವೆಯೆಂದು ಭಾವಿಸಲಾಗುವುದು. ಸರ್ಕಾರಿ ಸೇವೆಯಲ್ಲಿರುವ ಆ ಪ್ರಕ್ರಿಯೆ ಮೂಲಕ ವಿಲೀನಗೊಳಿಸಲಾದ ಅಧಿಕಾರಿಯು, ಜ್ಯೇಷ್ಠತೆಯ ಉದ್ದೇಶಕ್ಕಾಗಿ ಸಮಾನವಾದ ಪದವೃಂದದಲ್ಲಿ ಆತನ ಮೊದಲಿನ ಸೇವೆಯನ್ನು ಲೆಕ್ಕಹಾಕಲು ಹಕ್ಕುಳ್ಳವನಾಗಿರುವನು. ಅಂಥ ಸಂದರ್ಭದಲ್ಲಿ, ಹೊಸ ನೇಮಕವೆಂದು ಆತನನ್ನು ಭಾವಿಸಲು ಸರ್ಕಾರ ಸಕ್ಷಮವಾಗಿರುವುದಿಲ್ಲ. ಅದೇ ರೀತಿ ಮುಂಚಿನ ಜಿಲ್ಲಾ ಮಂಡಳಿಗಳ ನೌಕರರನ್ನು, ಸರ್ಕಾರಿ

ಸೇವೆಯಲ್ಲಿ ವಿಲೀನಗೊಳಿಸಬೇಕೆಂದು ಉಪಬಂಧಿಸಿದಲ್ಲಿ, 'ವಿಲೀನ' ಎಂಬ ಪದದ ಸ್ಪಷ್ಟ ಅರ್ಥವು, ಯಾವುದೇ ತಡೆಯಿಲ್ಲದೆ ನೌಕರನ ಸೇವೆಯ ಮುಂದುವರಿಕೆಯಾಗುತ್ತದೆ. ಅಂಥ ವಿಲೀನತೆಯಿಂದ ಆಗುವ ಪರಿಣಾಮವೇನೆಂದರೆ ಯಾವುದೇ ಅಡ್ಡಿಯುಂಟುಮಾಡದೆ ಸೇವೆಯಲ್ಲಿ ಮುಂದುವರಿಸುವುದಾಗಿದೆ. ಅಂಥ ಸಂದರ್ಭದಲ್ಲಿ ನಿಜವಾದ ಸ್ಥಾನವು ಮುಂಚಿನ ಜಿಲ್ಲಾ ಮಂಡಳಿಯ ಅಡಿಯಲ್ಲಿ ಸಲ್ಲಿಸಿದ ಸೇವೆಯನ್ನು ಸರ್ಕಾರದ ಅಡಿಯಲ್ಲಿ ಸಲ್ಲಿಸಲಾದ ಸೇವೆಯೊಂದಿಗೆ ಸೇರಿಸಬೇಕಾಗುತ್ತದೆ ಹಾಗೂ ಅಂಥ ವಿಲೀನತೆಯನ್ನು ಹಿಂದಿನ ಸೇವೆಯ ವಜಾಗೊಳಿಸುವಿಕೆ ಹಾಗೂ ಸರ್ಕಾರದಲ್ಲಿ ಸಲ್ಲಿಸಲಾದ ಸೇವೆಯ ಪ್ರಾರಂಭದ ಪರಿಕಲ್ಪನೆಯಿಂದ ಹೊರತುಪಡಿಸಲಾಗುವುದು. ಅಂಥ ಸಂದರ್ಭದಲ್ಲಿ, ರಾಜ್ಯದ ಸೇವೆಯಲ್ಲಿನ ಜ್ಯೇಷ್ಠತೆಯ ಉದ್ದೇಶಕ್ಕಾಗಿ ಹಿಂದಿನ ಇಡೀ ಅಥವಾ ಭಾಗಶ: ಸೇವೆಯನ್ನು ಹೊರತುಪಡಿಸಲು ಸರ್ಕಾರ ಸಕ್ಷಮವಾಗಿರುವುದಿಲ್ಲ. ಖಾಸಗಿ ಸಂಘ ಸಂಸ್ಥೆಯು ಸರ್ಕಾರಿ ಆದೇಶವನ್ನು ಪಡೆದುಕೊಂಡಲ್ಲಿ ಅದು ಪರಿಣಾಮಕಾರಿಯಾಗಿರುತ್ತದೆ. ಮೊದಲಿನ ಸೇವೆಯನ್ನು ಸರ್ಕಾರದ ಅಡಿಯಲ್ಲಿ ಜ್ಯೇಷ್ಠತೆಯ ಪರಿಗಣನೆಯನ್ನು ಲೆಕ್ಕಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಅಂಥ ಪಡೆದುಕೊಂಡ ಸೇವೆಯನ್ನು ಹೊಸ ನೇಮಕಾತಿಯ ಪರಿಕಲ್ಪನೆಯಿಂದ ಹೊರತುಪಡಿಸಲಾಗುವುದಿಲ್ಲ. ನಿಯೋಜಿತನು, ನಿಯೋಜನೆಗೊಂಡ ಇಲಾಖೆಯಲ್ಲಿ ವಿಲೀನತೆಯ ಬಲವಂತದ ಹಕ್ಕನ್ನು ಹೊಂದಿರುವುದಿಲ್ಲ. ನೌಕರನು ಯಾವಾಗಲೂ ಮೂಲ ಸಂಸ್ಥೆಗೆ ನಿಯೋಜಿತನನ್ನು ವಾಪಸು ಕಳಿಸುವ ಹಕ್ಕನ್ನು ಹೊಂದಿರುತ್ತಾನೆ. ಅಂದರೆ ಮೂಲ ಪ್ರಾಧಿಕಾರದ ಹಾಗೂ ಯಾವುದರ ಅಡಿಯಲ್ಲಿ ನಿಯೋಜನೆಯನ್ನು ಮಾಡಿಕೊಳ್ಳಲಾಗಿತ್ತೋ ಆ ಪ್ರಾಧಿಕಾರದ ಒಪ್ಪಿಗೆ ಅಗತ್ಯವಾಗಿರುತ್ತದೆ.

81. ಆದ್ದರಿಂದ ವಿಲೀನಗೊಂಡ ವ್ಯಕ್ತಿಯು ಕಾನೂನಿನ ರೀತಿಯಲ್ಲಿ ಸೇವೆಗೆ ನೇಮಕಗೊಂಡಿದ್ದನೆಂಬುದು ವಿಲೀನತೆಯಿಂದ

ಪೂರ್ವಭಾವಿತವಾಗಿರುತ್ತದೆ. ಅವನನ್ನು ವಿಲೀನಗೊಳಿಸಿದಾಗ, ಅದು ಹೊಸ ನೇಮಕಾತಿಯಾಗುವುದಿಲ್ಲ. ವಿಲೀನತೆಯು, ಅಡ್ಡಿಯಿರದ ಮುಂದುವರಿಕೆಯನ್ನು ದೃಢಪಡಿಸುತ್ತದೆ. ವಿಲೀನಗೊಂಡ ವ್ಯಕ್ತಿಯು, ಹುದ್ದೆಗೆ ನೇಮಕಾತಿ ಕಾರಣದ ಮೂಲಕವಾಗಲಿ ಅಥವಾ ಬಡ್ತಿ ಕಾರಣದ ಮೂಲಕವಾಗಲಿ ತನ್ನದೇ ಆದ ಸ್ವಂತ ಹಕ್ಕಿನ ಮುಖಾಂತರ ಸೇವೆಯಲ್ಲಿ ಶಾಶ್ವತ ಹುದ್ದೆಯನ್ನು ಹೊಂದಿರಲೇಬೇಕಾಗುತ್ತದೆ. ಅಂಥ ವಿಲೀನತೆಯಿಂದ ಆಗುವ ಪರಿಣಾಮವು ಯಾವುದೇ ಅಡೆ ತಡೆಯಿಲ್ಲದೆ ಸೇವೆಯಲ್ಲಿ ಮುಂದುವರಿಯುವುದಾಗಿರುತ್ತದೆ. ಹಳೆ ಹುದ್ದೆಯಲ್ಲಿ ಸಲ್ಲಿಸಲಾದ ಸೇವೆಯನ್ನು, ಹೊಸ ಹುದ್ದೆಯಲ್ಲಿನ ಸೇವೆಯೊಂದಿಗೆ ಸೇರಿಸಲಾಗುತ್ತದೆ, ಅದು ಹಿಂದಿನ ಸೇವೆಯ ವಜಾದ ಪರಿಕಲ್ಪನೆಯನ್ನು ಹೊಸ ಹುದ್ದೆಯಲ್ಲಿನ ಸೇವೆಯ ಪ್ರಾರಂಭವನ್ನು ಹೊರತುಪಡಿಸುತ್ತದೆ. ಹೊಸ ಉದ್ಯೋಗದಿಂದ ಹಳೆ ಉದ್ಯೋಗವನ್ನು ಸೇರಿಸುವ ಗೆರೆಯು, ಉದ್ಯೋಗದ ಕಾನೂನು ಬದ್ಧತೆಯಾಗಿರುತ್ತದೆ. ಈ ಕೊಂಡಿಯು ತಪ್ಪಿಹೋದರೆ, ಅದು ವಿಲೀನತೆಯಾಗಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ವಿಲೀನತೆಯನ್ನು ಅವಲಂಬಿಸಲಾಗುತ್ತದೆ. ವಿಲೀನಗೊಳ್ಳುವಿಕೆಯನ್ನು, ಒಂದು ಹುದ್ದೆಯಿಂದ ಮತ್ತೊಂದು ಹುದ್ದೆಗೆ ವರ್ಗಾಯಿಸಲಾಗಿದೆ ಅಥವಾ ಪ್ರತಿನಿಯೋಜಿಸಲಾಗಿದೆಯೆಂದು ಭಾವಿಸಬೇಕು ಹಾಗೆಯೇ ಅವರ ಸೇವೆಯಲ್ಲಿ ಯಾವುದೇ ತಡೆಯಿರುವುದಿಲ್ಲ".

50. ವಿಲೀನತೆಯ ಉದ್ದೇಶಕ್ಕಾಗಿ, ವಿಲೀನಗೊಂಡ ವ್ಯಕ್ತಿಯನ್ನು ಕಾನೂನು ರೀತಿಯಲ್ಲಿ ಸೇವೆಗೆ ನೇಮಕಮಾಡಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ನಂತರ ಮಧ್ಯಂತರ ಆದೇಶಕ್ಕೆ ಅನುಸಾರವಾಗಿ ಅವರು ಮುಂದುವರಿಯುತ್ತಿದ್ದರೂ ಸಹ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು.

ಆದ್ದರಿಂದ ಅವರ ಮುಂಚಿನ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ 3–ಬಿ ನಿಯಮವನ್ನು ಅಸಂವಿಧಾನಿಕವೆಂದು ರದ್ದುಗೊಳಿಸಲಾಗಿತ್ತು. 3–ಬಿ ನಿಯಮದ ಮೇರೆಗಿನ ಅವರ ನೇಮಕಾತಿ ಹಾಗೂ ಅದರ ಅನುಸಾರವಾಗಿ ಸಲ್ಲಿಸಲಾದ ಸೇವೆಯು ಕಾನೂನುಬದ್ಧವಾದುದಾಗಿದೆ. ಅವರು ವಜಾ ಆದೇಶವನ್ನಾಗಲಿ ಅಥವಾ ಅವರು ಸಲ್ಲಿಸಿದ ಸೇವೆಯನ್ನು ವೇತನ ಹಾಗು ಜ್ಯೇಷ್ಠತೆಯ ಉದ್ದೇಶಕ್ಕೆ ಪರಿಗಣಿಸಬಾರದು ಎಂಬುದನ್ನು ಸ್ಪಷ್ಟವಾಗಿ ತಿಳಿಸುವ ಅವರ ನೇಮಕಾತಿ ಆದೇಶವನ್ನಾಗಲಿ ಅವರು ಪ್ರಶ್ನಿಸಿರುವುದಿಲ್ಲ.

51. ಒಟ್ಟಾರೆಯಾಗಿ, ವಿಶೇಷ ನಿಯಮಗಳನ್ನು, ***ವಿಠಲ್‌ರವರ*** ಪ್ರಕರಣ(ಮೇಲಿನ) ದಲ್ಲಿನ ತೀರ್ಪಿಗೆ ಅನುಸಾರವಾಗಿ ವಜಾಗೊಳಿಸಲಾಗಿದ್ದವರ ಸೇವೆಯನ್ನು ಮಾನವಿಯತೆಯ ಪರಿಗಣನೆಯಂತೆ ಒಂದು ಬಾರಿಯ ಕ್ರಮವೆಂದು ಅವರನ್ನು ರಾಜ್ಯ ಸಿವಿಲ್ ಸೇವೆಗಳಲ್ಲಿ ವಿಲೀನಗೊಳಿಸಲು ಮಧ್ಯಂತರ ಆದೇಶದೊಂದಿಗೆ ರೂಪಿಸಲಾಗಿದೆ. ಇದು, ಅಭ್ಯರ್ಥಿಗಳು ವಾದಿಸಿದಂತೆ ಪರಿಹಾರಕ ಶಾಸನವಾಗಿರುವುದಿಲ್ಲ. ಅವರು ತಮ್ಮ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ ಸರಿಯಾದ ಪ್ರಯೋಜನವನ್ನು ವಿಸ್ತರಿಸುವ ವಿಲೀನತೆಯ ಸ್ವರೂಪದಲ್ಲಿಲ್ಲ. ಅವರು ವಜಾಗೊಳ್ಳುವ ಮೊದಲು ಹಾಗೂ ವಿಶೇಷ ನಿಯಮಗಳ ಮೇರೆಗೆ ಅವರ ವಿಲೀನತೆಯ ನಂತರ ತಾವು ಸಲ್ಲಿಸಿದ ಸೇವೆ ನಡುವೆ ಹೊಂದಾಣಿಕೆ ಇರುವುದಿಲ್ಲ. ವಿಲೀನತೆಗೆ ಮೊದಲು ಮಾಡಲಾದ ಅವರ ನೇಮಕಾತಿಯು ಸಿಂಧುವಾಗಿರಲಿಲ್ಲ. ವಿಶೇಷ ನಿಯಮಗಳ ಪರಿಭಾಷೆಯಲ್ಲಿ ಮಾಡಲಾದ ಅಭ್ಯರ್ಥಿಗಳ ನೇಮಕಾತಿಯು ಹೊಸ ನೇಮಕಾತಿಯಾಗಿದೆ ಹಾಗೂ ಅವರ ಪ್ರಾರಂಭಿಕ ನೇಮಕಾತಿಯ ದಿನಾಂಕದಿಂದ ಮುಂದುವರಿಕೆಯನ್ನು ಇದು ದೃಢಪಡಿಸಿಲ್ಲ. ಆದ್ದರಿಂದ ರಜೆ ಹಕ್ಕು ಹಾಗೂ ನಿವೃತ್ತಿ ವೇತನವನ್ನು ನಿರ್ಧರಿಸುವುದನ್ನು ಹೊರತುಪಡಿಸಿ, ವಿಶೇಷ ನಿಯಮಗಳ ಮೇರೆಗೆ ವಿಲೀನಗೊಂಡ ವ್ಯಕ್ತಿಗಳು ವಿಶೇಷ ನಿಯಮಗಳ ಮೇರೆಗೆ ನೇಮಕಾತಿ ಆದೇಶಗಳನ್ನು ಹೊರಡಿಸಿದ ನಂತರ ಹಾಗೂ ಒಂದು ದಿನ ಮೊದಲಲ್ಲದೆ

ಮೊದಲ ಬಾರಿಗೆ ಅವರು ಸೇವೆಗೆ ಸೇರಿದ್ದರೆ ಹೇಗೋ ಹಾಗೆ ಅವರನ್ನು ಭಾವಿಸಬೇಕಾಗುತ್ತದೆ.

52. ಮೇಲೆ ತಿಳಿಸಲಾದ ಕಾರಣಗಳಿಗಾಗಿ, ನಾವು, ನ್ಯಾಯಾಧಿಕರಣದ ಆದೇಶವು ಕಾನೂನಿನಲ್ಲಿ ಸಮರ್ಥಿಸಬಹುದಾದುದಲ್ಲವೆಂದು ಅಭಿಪ್ರಾಯಪಡುತ್ತೇವೆ. ರಿಟ್ ಅರ್ಜಿಗಳನ್ನು ತದನುಸಾರವಾಗಿ ಪುರಸ್ಕರಿಸಲಾಗಿದೆ. ಅರ್ಜಿ ಸಂ: 5999/2008 ದಿನಾಂಕ 23.11.2009ಕ್ಕೆ ಸಂಬಂಧಪಟ್ಟ ಅರ್ಜಿ ಸಂ:5140/2008ರಲ್ಲಿ ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ. ವೆಚ್ಚವಿರುವುದಿಲ್ಲ.